ವಿಜಯಪುರ | ಸಂಪುಟ 01 | ಸಂಚಿಕೆ 270 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com | Title Code: KARKAN28047 | ಗುರುವಾರ ಡಿಸೆಂಬರ್ 21, 2023


“ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರು ತಮ್ಮ ಸೇವಾ ಭದ್ರತೆಗಾಗಿ ಕಳೆದ 28 ದಿನಗಳಿಂದ ನಡೆಸುತ್ತಿರುವ ಹೋರಾಟ ನ್ಯಾಯಯುತವಾಗಿದ್ದು, ಸರ್ಕಾರ ಶೀಘ್ರ ಅವರ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು.”



ಉದಯರಶ್ಮಿ ದಿನಪತ್ರಿಕೆ

– ಸಂಗಮೇಶ ಬಬಲೇಶ್ವರ

ಕೆಪಿಸಿಸಿ ಪ್ರಚಾರ ಸಮಿತಿ ಮುಖ್ಯ ವಕ್ತಾರರು


### ಬುಧವಾರ 20 ಪ್ರಕರಣಗಳು ಪತ್ತೆ । ಇಬ್ಬರು ಸಾವು । ಸಕ್ರೀಯ ಪ್ರಕರಣಗಳ ಸಂಖ್ಯೆ 92ಕ್ಕೆ ಏರಿಕೆ । ಪಾಸಿಟಿವಿಟಿ ಪ್ರಮಾಣ ಶೇ.2.49

# ರಾಜ್ಯದಲ್ಲಿ ಮತ್ತೆ ಕೊರೋನಾ ಆರ್ಭಟ ಶುರು!

ಬೆಂಗಳೂರು: ಕಳೆದ ಎರಡು ವರ್ಷಗಳಿಂದ ದೂರವಾಗಿದ್ದ ಮಹಾಮಾರಿ ಕೊರೋನಾ ಇದೀಗ ಮತ್ತೆ ತನ್ನ ಆರ್ಭಟ ಶುರು ಮಾಡಿಕೊಂಡಿದೆ.

ಬುಧವಾರ ರಾಜ್ಯದಲ್ಲಿ 20 ಕೊರೋನಾ ಪ್ರಕರಣಗಳು ಪತ್ತೆಯಾಗಿದ್ದು ಇಬ್ಬರು ಸಾವನ್ನಪ್ಪಿದ್ದಾರೆ.

ಈ ಮಧ್ಯೆ ರಾಜ್ಯದಲ್ಲಿ ಬುಧವಾರ ಒಂದೇ ದಿನ 22 ಕೊರೋನಾ ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿವೆ. ಇದರೊಂದಿಗೆ ಕೊರೋನಾ ಸಕ್ರೀಯ ಪ್ರಕರಣಗಳ ಸಂಖ್ಯೆ 92ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 19, ಬಳ್ಳಾರಿಯಲ್ಲಿ 2, ದಕ್ಷಿಣ ಕನ್ನಡದಲ್ಲಿ 1 ಪ್ರಕರಣ ಪತ್ತೆಯಾಗಿದೆ.





ಕಳೆದ 24 ಗಂಟೆಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 808 ಪರೀಕ್ಷೆಗಳನ್ನು ಮಾಡಲಾಗಿದ್ದು, ಇವುಗಳಲ್ಲಿ 407 ಆರ್‌ಟಿ-ಪಿಸಿಆರ್ ಮತ್ತು 401 ರಾಪಿಡ್ ಆಂಟಿಜೆನ್ ಪರೀಕ್ಷೆಗಳಾಗಿವೆ. ರಾಜ್ಯದಲ್ಲಿ ಕೋವಿಡ್ ಪಾಸಿಟಿವಿಟಿ ಪ್ರಮಾಣವು 2.49 ಪ್ರತಿಶತದಷ್ಟಿದ್ದರೆ, ಪ್ರಕರಣದ ಸಾವಿನ ಪ್ರಮಾಣವು ಶೇಕಡಾ 10 ರಷ್ಟಿದೆ ಎಂದು ಅದು ಹೇಳಿದೆ.

ಈ ಪೈಕಿ 72 ಮಂದಿಗೆ ಹೋಮ್ ಐಸೋಲೇಷನ್‌ನಲ್ಲಿ ಇರಲು ಸೂಚನೆ ನೀಡಲಾಗಿದೆ. 20 ರೋಗಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಐಸಿಯುನಲ್ಲಿ 7 ಮಂದಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ನೆರೆಯ ಕೇರಳದಲ್ಲಿ ಕೋವಿಡ್-19 ಜೆಎನ್1 ರೂಪಾಂತರಿ ಪತ್ತೆಯಾದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೈಗೊಳ್ಳಬೇಕಾದ ಅಗತ್ಯ ಮುಂಜಾಗ್ರತೆ ಹಾಗೂ ಪೂರ್ವಭಾವಿ ಕ್ರಮಗಳ ಕುರಿತು ರಾಜ್ಯ ಆರೋಗ್ಯ ಇಲಾಖೆ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಕೇರಳ ಹಾಗೂ ತಮಿಳುನಾಡು ರಾಜ್ಯಕ್ಕೆ ಹೊಂದಿಕೊಂಡಿರುವ ಗಡಿ ಭಾಗದ ಜಿಲ್ಲೆಗಳಲ್ಲಿ ಅಗತ್ಯ ಸಂಖ್ಯೆಯ ಪರೀಕ್ಷೆ ನಡೆಸಿ, ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಔಷಧ, ಆಕ್ಸಿಜನ್, ಬೆಡ್ ವ್ಯವಸ್ಥೆ ಮಾಡಿಕೊಳ್ಳಲು ಸೂಚನೆ ನೀಡಲಾಗಿದೆ. ಅಲ್ಲದೇ ಕೊವಿಡ್ ಟೆಸ್ಟ್ ಹೆಚ್ಚಿಸಲು ಅಧಿಕಾರಿಗಳು, ಸಿಬ್ಬಂದಿಗೆ ಸೂಚಿಸಲಾಗಿದೆ.

## ಪ್ರಯಾಣಿಕರಿಗೆ ಮಾಸ್ಕ್ ಕಡ್ಡಾಯ :ಸಚಿವ ರಾಮಲಿಂಗಾರೆಡ್ಡಿ



ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಭೀತಿ ಹಿನ್ನೆಲೆ ಸರ್ಕಾರದ ಮಾರ್ಗಸೂಚಿಂ-ಯಂತೆ ಕೆಎಲ್ ಆರ್ ಟಿಸಿ ಮತ್ತಿ ಬಿಎಂಟಿಸಿ ಬಸ್‌ಗಳಲ್ಲಿ ಮಾಸ್ಕ್ ಕಡ್ಡಾಯವಾಗಿ ಧರಿಸಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.

ಈ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ರಾಮಲಿಂಗಾ ರೆಡ್ಡಿ, ಸರ್ಕಾರದ ಆದೇಶವನ್ನು ನಾವು ಕಟ್ಟನಿಟ್ಟಾಗಿ ಪಾಲನೆ ಮಾಡುತ್ತೇವೆ. ಇಂದು ಕೇಂದ್ರ ಆರೋಗ್ಯ ಸಚಿವರ ಜೊತೆ ಸಚಿವ ದಿನೇಶ್ ಗುಂಡೂರಾವ್ ಸಭೆ ನಡೆದಿದೆ. ಸಭೆಯಲ್ಲಿ ಸಲಹೆ ಪಡೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರದ ಆದೇಶದಂತೆ ಮುಜರಾಯಿ ಇಲಾಖೆ ಹಾಗೂ ಸಾರಿಗೆ ನಿಗಮಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿಯಲ್ಲಿ ಪ್ರಯಾಣಿಸುವ ಪ್ರತಿಯೊಬ್ಬ ಪ್ರಯಾಣಿಕರೂ ಮಾಸ್ಕ್ ಧರಿಸಿ ಪ್ರಯಾಣಿಸಿ ಎಂದು ಮನವಿ ಮಾಡಿದರು.

ಕೇರಳದಲ್ಲಿ ಕೋವಿಡ್ ಆರ್ಭಟ ಹಿನ್ನೆಲೆ ಕೆಎಸ್‌ಆರ್‌ಟಿಸಿ ಮತ್ತೆ ಅಲರ್ಟ್ ಆಗಿದ್ದು, ಕೇರಳದಿಂದ ಬರುವ ಹಾಗೂ ಹೋಗುವ ಬಸ್ಸುಗಳಿಗೆ ಮುನ್ನೆಚ್ಚರಿಕಾ ಕ್ರಮವಾಗಿ ಸ್ಯಾನಿಟೈಸರ್ ಸಿಂಪಡಿಸಲು ಸಚಿವ ರಾಮಲಿಂಗಾ ರೆಡ್ಡಿ ಸೂಚನೆ ನೀಡಿದ್ದಾರೆ. ಅದರಂತೆ ಅಧಿಕಾರಿಗಳು ಕ್ರಮಕೈಗೊಳ್ಳಲು ಮುಂದಾಗಿದ್ದಾರೆ.

### ಬೈಕ್-ಆಟೋ ರ್‍ಯಾಲಿಗೆ ಚಾಲನೆ ನೀಡಿದ ಸಚಿವ ಶಿವಾನಂದ ಪಾಟೀಲ ಅಭಿಮತ

# ರಾಮ-ಹನುಮ ನಮ್ಮ ಸಂಸ್ಕೃತಿಯ ಪ್ರತೀಕ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ ವೃತ್ತದಲ್ಲಿ ವಿಶ್ವಹಿಂದು ಪರಿಷದ್, ಬಜರಂಗದಳದ ಸಹಯೋಗದಲ್ಲಿ ಡಿ.21 ರಂದು ಹಮ್ಮಿಕೊಂಡಿರುವ ಹನುಮಾಲ ಪಾದುಕೆ ಪಲ್ಲಕ್ಕಿ ಉತ್ಸವ ಹಾಗೂ ಮಾತೃ ಶಕ್ತಿ ದುರ್ಗಾವಾಹಿನಿ ವಾರ್ಷಿಕೋತ್ಸವ ಸಮಾರಂಭದಂಗವಾಗಿ ಬುಧವಾರ ಬೈಕ್ ಹಾಗೂ ಅಟೋ ರ್‍ಯಾಲಿಗೆ ಸಕ್ಕರೆ ಅಭಿವೃದ್ಧಿ, ಜವಳಿ, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ಚಾಲನೆ ನೀಡಿದರು.



ನಂತರ ಮಾತನಾಡಿದ ಅವರು, ರಾಮ ಮತ್ತು ಹನುಮಂತ ನಮ್ಮ ದೇಶದ ಸಾಂಸ್ಕೃತಿಕ ಪ್ರತೀಕರಾಗಿದ್ದಾರೆ. ಸನಾತನ ಕಾಲದಿಂದಲೂ ರಾಮ ಮತ್ತು ಹನುಮಂತನ ಪೂಜೆ ನಡೆಯುತ್ತಿದೆ. ಎಲ್ಲರೂ ಒಂದಾಗಿ ಧಾರ್ಮಿಕ ಆಚ-ರಣೆಗಳು ನಡೆಯುವ ಮೂಲಕ ಸಮಾಜ ಜಾಗೃತಿಯಾಗಬೇಕು. ರಾಮ, ಹನುಮಂತನ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕೆಂದರು.

ಈ ಸಂದರ್ಭದಲ್ಲಿ ವ್ಹಿಡಿಸಿಸಿ ಬ್ಯಾಂಕಿನ ನಿರ್ದೇಶಕ ಚಂದ್ರಶೇಖರಗೌಡ ಪಾಟೀಲ, ಸಾಹಿತಿ ವಿವೇಕಾನಂದ ಕಲ್ಯಾಣಶೆಟ್ಟಿ, ಬಜರಂಗದಳದ ಜಿಲ್ಲಾ ಸಹ ಸಂಯೋಜಕ ತಮ್ಮಣ್ಣ ಬಡಿಗೇರ, ಮಹೇಶ ಸಾಲವಾಡಗಿ, ಪದ್ಮರಾಜ ಒಡೆಯರ, ಶರಣು ವಾಡೇದ, ರವಿ ಮ್ಯಾಗೇರಿ, ಅಶ್ವಿನಿಕುಮಾರ ಪಟ್ಟಣಶೆಟ್ಟಿ, ಬಸವರಾಜ ಅಳ್ಳಗಿ, ರಾಹುಲ ಜಗತಾಪ, ಸಂತೋಷ ಹಿಂಗೋಲಿ, ಷಣ್ಮುಖ ಹಿರೇಮಠ, ಶಿವು ಬೆಲ್ಲದ, ವಿಜಯಕುಮಾರ ಗೊಳಸಂಗಿ, ರಾಜು ಪಿಡ್ಡಿ, ಅವಿನಾಶ ಹಂಗರಗಿ, ಮಂಜುನಾಥ ಮುದ್ದೂರ, ಸದು ಗೊಳಸಂಗಿ,ಪ್ರಕಾಶ ಕುಳಗೇರಿ, ಚಂದ್ರಶೇಖರ ಖ್ಯಾಡದ, ಬಸವರಾಜ ಗೊಳಸಂಗಿ, ರೂಪಾ ಜಾಧವ, ವಿದ್ಯಾಶ್ರೀ ಬಡಿಗೇರ ಇತರರು ಇದ್ದರು.

## ಡಿ.21 ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ಉದಯರಶ್ಮಿ ನ್ಯೂಸ್




ವಿಜಯಪುರ: ವಿಜಯಪುರ ಜಿಲ್ಲೆಯ 110ಕೆ.ವಿ ನಿಡಗುಂದಿ ಹಾಗೂ ಮುಖರ್ತಿಹಾಳ ಉಪ ಕೇಂದ್ರಗಳ ತ್ರೈಮಾಸಿಕ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಈ ವಿದ್ಯುತ್ ಉಪ-ಕೇಂದ್ರಗಳಿಂದ ವಿದ್ಯುತ್ ಸರಬರಾಜು ಹೊಂದುವ 33ಕೆ.ವಿ ಮಾರ್ಗಗಳು ಹಾಗೂ 11ಕೆ.ವಿ ನಿರಂತರ ಜ್ಯೋತಿ ಮಾರ್ಗಗಳು, ಕೃಷಿ ನೀರಾವರಿ ಮಾರ್ಗಗಳು, ನಿಡಗುಂದಿ ಪಟ್ಟಣ, ಆಲಮಟ್ಟಿ ಹಾಗೂ ಬ.ಬಾಗೇವಾಡಿ, ಇಂಗಳೇಶ್ವರ, ಹಂಗರಗಿ, ಹೂವಿನ ಹಿಪ್ಪರಗಿ ಬಹುಹಳ್ಳಿ ಕುಡಿಯುವ ನೀರಿನ ಘಟಕಗಳಿಗೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಡಿ 21ರಂದು ಬೆಳಿಗ್ಗೆ 10ಗಂಟೆಯಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಬಸವನ ಬಾಗೇವಾಡಿಯ ಹೆಸ್ಕಾಂನ ಕಾರ್ಯನಿವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ರಾಜ ನುಡಿ

ಆ ನಾಲ್ಕು ಜನ ನಮ್ಮೊಂದಿಗೆ ಮಾತನಾಡುವುದನ್ನು ನಿಲ್ಲಿಸಿದ್ದಾರೆ, ಸರಿಯಾಗಿ ಸ್ಪಂದಿಸುತ್ತಿಲ್ಲ, ಮೊದಲಿನಂತೆ ಪ್ರೀತಿಸುತ್ತಿಲ್ಲ ಎಂದು ಇಡೀ ದಿನ, ಇಡೀ ತಿಂಗಳು, ಇಡೀ ವರ್ಷ, ಇಡೀ ಜೀವನ ನೋವು ಪಟ್ಟುಕೊಂಡು ಇರುವವರು ನಮ್ಮಲ್ಲಿ ಅನೇಕ-ರಿದ್ದಾರೆ. ನೆನಪಿರಲಿ ಭಾರತ ಅಂದಾಜು 140 ಕೋಟಿ ಜನಸಂಖ್ಯೆಯನ್ನು ಹೊಂದಿದೆ. ಆ ನಾಲ್ಕು ಜನರಿಗೆ ಕಟ್ಟು ಬಿದ್ದು ಬದುಕದಿರಿ. ಬೇಗ ಸ್ವತಂತ್ರವಾಗಿ, ಅನಿಕೇತನವಾಗಿ..

-ಡಾ. ರಾಜಶೇಖರ ನಾಗೂರ



## ವಚನ ಚಿಂತನ 260

### ಲಿಂಗದ ಆಳ ಹರವು

*ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,*
*ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ,*
*ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮಕುಟ,*
*ಅಗಮ್ಯ, ಅಗೋಚರ ಅಪ್ರತಿಮ ಲಿಂಗವೆ,*
*ಕೂಡಲಸಂಗಮದೇವಯ್ಯಾ,*
*ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ.*
*– ಬಸವಣ್ಣನವರು*

ಆಧುನಿಕ ಖಗೋಳವಿಜ್ಞಾನಿಗಳ ಸಾಧನ ಸಲಕರಣೆಗೆ ನಿಲಕದೆ ಅಗಾಧ ವಿಸ್ತಾರಹೊಂದಿರುವ ಬ್ರಹ್ಮಾಂಡದ ವಿರಾಟ ರೂಪವನ್ನು ಗುರುಬಸವಣ್ಣನವರು ಇಷ್ಟಲಿಂಗದಲ್ಲಿ ಕಾಣುತ್ತ, ಬಿಲಿಯನ್ ಬಿಲಿಯನ್ ಸಂಖ್ಯೆಯಲ್ಲಿ ಆಕಾಶ ಕಾಯಗಳನ್ನು ಸೃಷ್ಟಿಸಿ ಅವುಗಳಿಗೊಂದು ಸುತ್ತುವ ನಿರ್ದಿಷ್ಟ ಪಥಗೊತ್ತುಪಡಿಸಿ ಸೃಷ್ಟಿಯೊಳಗಿನ ಎಲ್ಲ ಅಣುರೇಣುಗಳಲ್ಲಡಗಿ ಅಗಮ್ಯ, ಅಗೋಚರ, ಅಪ್ರತಿಮ ಸೃಷ್ಟಿಚಾಲನಾ ಶಕ್ತಿಯಾದ ಕೂಡಲಸಂಗಮದೇವನನ್ನು ಅಂಗೈಯೊಳಗೆ ಇಷ್ಟಲಿಂಗರೂಪದಲ್ಲಿ ಕಂಡು(ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ.)ಬೆರಗಾಗಿದ್ದಾರೆ. ಇದು ಇಷ್ಟಲಿಂಗದ ನೈಜ ಸ್ವರೂಪ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

### ಮುಷ್ಕರ ನಿರತ ಉಪನ್ಯಾಸಕರ ಮನವಿ ಸ್ವೀಕರಿಸಿದ ಕೆಪಿಸಿಸಿ ಮುಖ್ಯ ವಕ್ತಾರ ಸಂಗಮೇಶ ಬಬಲೇಶ್ವರ ಅಭಿಮತ

# ಅತಿಥಿ ಉಪನ್ಯಾಸಕರ ಬೇಡಿಕೆಗೆ ಸರ್ಕಾರ ಶೀಘ್ರ ಸ್ಪಂದಿಸಲಿ

ಉದಯರಶ್ಮಿ ನ್ಯೂಸ್

ವಿಜಯಪುರ: ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರು ತಮ್ಮ ಸೇವಾ ಖಾಯಂಮಾತಿಗಾಗಿ ಕಳೆದ 28 ದಿನಗಳಿಂದ ನಡೆಸುತ್ತಿರುವ ಹೋರಾಟ ನ್ಯಾಯಯುತವಾಗಿದ್ದು, ಸರ್ಕಾರ ಶೀಘ್ರ ಅವರ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿಯ ಮುಖ್ಯ ವಕ್ತಾರ ಸಂಗಮೇಶ ಬಬಲೇಶ್ವರ ಆಗ್ರಹಿಸಿದ್ದಾರೆ.

ವಿಜಯಪುರ ಜಿಲ್ಲಾಧಿಕಾರಿಗಳ ಆವರಣದ ಹತ್ತಿರ ಕಳೆದ 27 ದಿನಗಳಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿರುವ ಉಪನ್ಯಾಸಕರನ್ನು ಭೇಟಿ ಮಾಡಿ ಅವರ ಮನವಿ ಸ್ವೀಕರಿಸಿ ಮಾತನಾಡಿದ ಬಬಲೇಶ್ವರ ಅವರು, “ಕಳೆದ 20 ವರ್ಷದಿಂದ ಸಾವಿರ ರೂಪಾಯಿ ಸಂಬಳಕ್ಕೆ ಪ್ರಾರಂಭವಾಗಿರುವ ಎಲ್ಲಾ ಅತಿಥಿ ಉಪನ್ಯಾಸಕರ ನೋವಿನ ಕಥೆ ಕೇಳಿದರೆ ದುಃಖವಾಗುತ್ತದೆ. ಕಳೆದ ಎರಡು ದಶಕಗಳಿಂದಲೂ ಆಡಳಿತದಲ್ಲಿರುವ ಯಾವ ಪಕ್ಷದ ಸರಕಾರವಿದ್ದಾಗಲೂ ಯಾವ ಮುಖ್ಯಮಂತ್ರಿಯೂ ನಮ್ಮ ಬೇಡಿಕೆಗೆ ಸ್ಪಂದಿಸಿಲ್ಲ ಎನ್ನುವುದು ಅವರ ನೋವಾಗಿದೆ. ಈಗಾಗಲೇ ಚಳಿಗಾಲ ಅಧಿವೇಶನದ ಸಂದರ್ಭದಲ್ಲಿ ಸಚಿವ ಡಾ. ಎಂ ಬಿ ಪಾಟೀಲರು ಸುವರ್ಣ ಸೌಧದ ಮುಂದೆ ಧರಣಿ ನಿರತರನ್ನು ಭೇಟಿಯಾಗಿ ಅವರ ಮನವಿ ಸ್ವೀಕರಿಸಿ ಮುಖ್ಯಮಂತ್ರಿಗಳ ಗಮನ ಸೆಳೆದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಶಿಕ್ಷಣ ಪ್ರೇಮಿಗಳು, ಜೊತೆಗೆ ಅತ್ಯಂತ ದಕ್ಷ ಮತ್ತು ಪ್ರಾಮಾಣಿಕ ಆಡಳಿತಗಾರರಾಗಿರುವುದ-ರಿಂದ ಖಂಡಿತವಾಗಿಯೂ ನಿಮ್ಮ ಬೇಡಿಕೆಗೆ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ಪರಿಹಾರ ದೊರೆಯುತ್ತದೆನ್ನುವ ಆತ್ಮವಿಶ್ವಾಸ ನನಗಿದೆ” ಎಂದು ಹೇಳಿದರು.





ಮಕ್ಕಳ ಕಲಿಕೆಯ ಹಿತದೃಷ್ಟಿಯಿಂದ ತಾವು ಆದಷ್ಟು ಬೇಗನೆ ತರಗತಿಗಳಿಗೆ ಮರಳುವಂತಾಗಲಿ ಎನ್ನುವುದು ನಮ್ಮೆಲ್ಲರ ಸದಾಶಯವಾಗಿದೆ ಎಂದು ಧರಣಿ ನಿರತ ಅಧ್ಯಾಪಕರಲ್ಲಿ ಕೈ ಮುಗಿದು ಕೇಳಿಕೊಂಡರು.

ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾದ ಡಾ. ಎಂ ಬಿ ಪಾಟೀಲರು ಸರ್ಕಾರದಲ್ಲಿ ಅತ್ಯಂತ ಪ್ರಭಾವಿ ಸಚಿವರಾಗಿದ್ದು, ಖಂಡಿತವಾಗಿಯೂ ಅವರು ನಿಮಗೆ ನ್ಯಾಯ ದೊರಕಿಸಿ ಕೊಡುತ್ತಾರೆ ಎನ್ನುವ ವಿಶ್ವಾಸ ನನಗಿದೆ ಎಂದು ಬಬಲೇಶ್ವರ ಹೇಳಿದರು.

ಈ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಡಬ್ಬಿಯವರು ಹಾಗೂ ಆನಂದ್ ಕುಲಕರ್ಣಿ ಅವರನ್ನು ಒಳಗೊಂಡಂತೆ ನೂರಾರು ಜನ ಧರಣಿ ನಿರತ ಉಪನ್ಯಾಸಕರು ಪಾಲ್ಗೊಂಡಿದ್ದರು.

### ಪಿಎಲ್‌ಡಿ ಬ್ಯಾಂಕಿನ ಅವ್ಯವಹಾರ ಮತ್ತು ಬ್ಯಾಂಕಿನ ಅಧ್ಯಕ್ಷ, ಹಿರಿಯ ಅಧಿಕಾರಿಗಳ ದುರ್ನಡತೆಗೆ ಖಂಡನೆ

# ದಲಿತಪರ ಸಂಘಟನೆಗಳಿಂದ ಧರಣಿ ಸತ್ಯಾಗ್ರಹ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಇಲ್ಲಿನ ಬಸ್ ನಿಲ್ದಾಣದ ಎದುರಿಗಿನ ಪಿಎಲ್‌ಡಿ ಬ್ಯಾಂಕ್ ನಲ್ಲಿ ಅವ್ಯವಹಾರವಾಗಿದೆ ಮತ್ತು ಬ್ಯಾಂಕಿನ ಅಧ್ಯಕ್ಷ ಮತ್ತು ಹಿರಿಯ ಅಧಿಕಾರಿಗಳ ದುರ್ನಡತೆ ಎಂದು ಆರೋಪಿಸಿ ವಿವಿಧ ದಲಿತಪರ ಸಂಘಟನೆಗಳ ನೇತೃತ್ವದಲ್ಲಿ ಸೋಮವಾರ ಧರಣಿ ಸತ್ಯಾಗ್ರಹ ಆರಂಭಿಸಿದರು.



ಈ ವೇಳೆ ಮುಖಂಡ ಹರೀಶ ನಾಟೇಕಾರ ಮಾತನಾಡಿ, ರೈತರಿಗೆ ಸಹಾಯವಾಗಬೇಕಾದ ಪಿಎಲ್‌ಡಿ ಬ್ಯಾಂಕ್ ನಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿವೆ. ಪ್ರತೀ ವರ್ಷ ನಬಾರ್ಡ್ ಬ್ಯಾಂಕ್ ನಿಂದ ಬರುವ 2ಕೋಟಿ ರೂ ಅನುದಾನವನ್ನು ಅಧ್ಯಕ್ಷರು ಮತ್ತು ವ್ಯವಸ್ಥಾಪಕ ಮಂಡಳಿ ಗುಳುಂ ಮಾಡಿದ್ದಾರೆ. ಬ್ಯಾಂಕ್ ನ ಪಕ್ಕದಲ್ಲಿರುವ ವಾಣಿಜ್ಯ ಮಳಿಗೆಗಳಲ್ಲಿ ಯಾವುದೇ ಮೀಸಲಾತಿಯನ್ನು ಕಲ್ಪಿಸಿಲ್ಲ ಮತ್ತು ಟೆಂಡರ್ ಪ್ರಕ್ರೀಯೆ ಕೂಡ ನಡೆದಿಲ್ಲ. ಬ್ಯಾಂಕ್ ನ ಅಧ್ಯಕ್ಷರು ತಮ್ಮ ಅಧಿಕಾರವನ್ನು ದುರುಪಯೋಗ ಪಡೆದುಕೊಂಡು ತಮ್ಮ ಸಂಬಂಧಿಕರಿಗೆ ಮಾತ್ರ ಸಹಾಯ ಮಾಡುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಕುಮ್ಮಕ್ಕು ನೀಡುತ್ತಿದ್ದು ಈ ಬಗ್ಗೆ ತಾಲೂಕು ದಂಡಾಧಿಕಾರಿಗಳಿಗೆ ಲಿಖಿತ ಮನವಿ ಸಲ್ಲಿಸಿದರೂ ಯಾವುದೇ ಕ್ರಮವಾಗಿಲ್ಲ. ಹಾಗಾಗಿ ಧರಣಿ ಆರಂಭಿಸಿದ್ದು ಬುಧವಾರದ ಸಂಜೆಯವರೆಗೆ 3 ದಿನಗಳು ಕಳೆದರೂ ಯಾರೊಬ್ಬ ಅಧಿಕಾರಿಯೂ ಭೇಟಿ ನೀಡಿಲ್ಲ. ಗುರುವಾರದಿಂದ ಹೋರಾಟವನ್ನು ಇನ್ನಷ್ಟು ಉಗ್ರವಾಗಿಸುವುದಾಗಿ ತಿಳಿಸಿದರು.

ಮುಖಂಡ ಬಸವರಾಜ ಪೂಜಾರಿ ಮಾತನಾಡಿ, ರೈತರಿಗಾದ ಅನ್ಯಾಯಕ್ಕೆ ನ್ಯಾಯ ಕೇಳಲು ಧರಣಿ ಆರಂಭಿಸಿದರೆ ನಮ್ಮ ಮೇಲೆಯೇ ಪೊಲೀಸ್ ಕೇಸ್ ದಾಖಲಿಸುವ ಕುತಂತ್ರ ನಡೆಸಿದ್ದಾರೆ. ಯಾವುದೇ ರೀತಿಯಿಂದ ನಮ್ಮನ್ನು ಭಯ ಪಡಿಸಲು ಪ್ರಯತ್ನಿಸಿದರೂ ನಾವು ಹೆದರಲ್ಲ. ಅನ್ಯಾಯಕ್ಕೆ ನ್ಯಾಯ ಸಿಗುವವರೆಗೂ ನಮ್ಮ ಹೋರಾಟ ಹಂತ ಹಂತವಾಗಿ ಉಗ್ರರೂಪ ತಾಳಲಿದೆ ಎಂದರು.

ಧರಣಿ ಸ್ಥಳದಲ್ಲಿ ಹೋರಾಟಗಾರರು ತಮಟೆಬಾರಿಸುತ್ತ, ಬೊಬ್ಬೆ ಹಾಕುತ್ತ ತಮ್ಮ ಆಕ್ರೋಶವನ್ನು ಹೊರಹಾಕಿದರು. ಈ ವೇಳೆ ಶರಣು ಸರೂರ, ಗೋಪಾಲ ದಾಸರ, ಸಂಗು ಚಲವಾದಿ ಸೇರಿದಂತೆ ಮತ್ತೀತರರು ಭಾಗಿಯಾಗಿದ್ದರು.

# ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿದರೆ ಸಾಧನೆ ಖಚಿತ

**ಉದಯರಶ್ಮಿ ನ್ಯೂಸ್**

ವಿಜಯಪುರ: ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದರೆ ಅವರು ಉನ್ನತ ಸಾಧನೆ ಮಾಡಬಲ್ಲರು ಎಂದು ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ ಹೇಳಿದ್ದಾರೆ.



ನಗರದ ಪ್ರತಿಷ್ಠಿತ ಬಿಎಲ್‌ಡಿಇ ಸಂಸ್ಥೆಯ ಶ್ರೀ ಬಿ. ಎಂ. ಪಾಟೀಲ ಪಬ್ಲಿಕ್ ಶಾಲೆಯಲ್ಲಿ ರವಿವಾರ ನಡೆದ ಸಂಶೋಧನಾತ್ಮಕ ವಿಜ್ಞಾನ ಮಾದರಿಯ ವಸ್ತು ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಲೆಯ ಪ್ರಾಚಾರ್ಯೆ ಬಂಧನಾ ಬ್ಯಾನರ್ಜಿ, ಪ್ರತಿಯೊಂದು ತರಗತಿಗಳ ಎಲ್ಲ ಮಕ್ಕಳು ಒಂದಲ್ಲ ಒಂದು ಚಟುವಟಿಕೆಯಲ್ಲಿ ಪಾಲ್ಗೊಂಡಿರುವುದು ವಿಶೇಷವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಮಕ್ಕಳಲ್ಲಿ ವಿಜ್ಞಾನ ಮತ್ತು ಸಂಶೋಧನೆಯ ಅಗಾಧ ಪ್ರತಿಭೆ ಇರುತ್ತವೆ. ಇಲ್ಲಿನ ವಿದ್ಯಾರ್ಥಿಗಳು ಇಲ್ಲಿ ಪ್ರದರ್ಶಿಸಿರುವ ವಿಜ್ಞಾನ ಮಾದರಿಗಳು ಇದಕ್ಕೆ ಸಾಕ್ಷಿ ಎಂದು ಅವರು ವಿದ್ಯಾರ್ಥಿಗಳ ಪ್ರತಿಭೆಯನ್ನು ಶ್ಲಾಘಿಸಿದರು. ಮನೋಭಾವನೆಯನ್ನು, ಸಂಶೋಧನಾ ಪ್ರವೃತ್ತಿಯನ್ನು, ಕಲಾತ್ಮಕತೆಯನ್ನು ಮನದುಂಬಿ ಹೊಗಳಿದರು.

ಈ ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ತಯಾರಿಸಿದ ವಿಜ್ಞಾನ ಮಾದ–ರಿಗಳಾದ, ಹಿಮಾಚ್ಛಾದಿತ ಇಗ್ಲೂ ಮನೆಗಳು, ಅಂಧರಿಗಾಗಿ ತಯಾ–ರಿಸಿದ ಮೂರನೇ ಕಣ್ಣು ಕನ್ನಡಕ, ಚಂದ್ರಯಾನ ಉಪಗ್ರಹ ಉಡ–ಾವಣೆಯ ಮಾದರಿ, ಬೃಹದಾಕಾರದ ಚಿಟ್ಟೆ, ಗುಲಾಬಿ ಉದ್ಯಾನ ಮುಂತಾದ ಮಾಡಲ್ ಗಳು ಪಾಲಕರ ಗಮನ ಸೆಳೆದವು. ಶಾಲೆಯ ನಾನಾ ಸದನಗಳ ವಿಧ್ಯಾರ್ಥಿಗಳು ಹಾಕಿದ ರಂಗೋಲಿ, ಫಲ, ಪುಷ್ಪಾಲಂಕಾರ ನೋಡುಗರ ಮನ ಸೆಳೆದವು. ಇಡಿ ಶಾಲೆಯಲ್ಲಿ ಮಕ್ಕಳು ತಯಾರಿಸಿದ ವಿಜ್ಞಾನ ಮಾದರಿಗಳು ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಗೆ ಸಾಕ್ಷಿಯಾಗಿದ್ದವು.

ಶಾಲೆಯ ಹೊರ ಮೈದಾನದಲ್ಲಿ ಮಕ್ಕಳು ತಮ್ಮ ಪಾಲಕರಿಗಾಗಿ ಮತ್ತು ಮಕ್ಕಳಿಗಾಗಿ ನಾನಾ ಬಗೆಯ ಬುದ್ಧಿಮತ್ತೆಯ ಚಮತ್ಕಾರಿ ಆಟಗಳನ್ನು ಏರ್ಪಡಿಸಿ ಎಲ್ಲರನ್ನು ರಂಜಿಸಿದರು. ಈ ಸ್ಪರ್ಧೆಗಳಲ್ಲಿ ವಿಜೇತರಿಗೆ ಉಚಿತ ಫುಡ್ ಕೂಪನ್ ವಿತರಿಸಿದರು.

ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಕೌಶಿಕ ಬ್ಯಾನರ್ಜಿ ಮತ್ತು ಹಿರಿಯ ಕಾರ್ಯ ಸಂಯೋಜಕಿ ದೀಪಾ ಜಂಬೂರೆ ಉಪಸ್ಥಿತರಿದ್ದರು.

# ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕಾರ್ಮಿಕರ ಪ್ರತಿಭಟನೆ



**ಉದಯರಶ್ಮಿ ನ್ಯೂಸ್**

ಸಿಂದಗಿ: ಈ ಹಿಂದೆ ಕೇಂದ್ರದಲ್ಲಿ ಸರಕಾರ ಅಧಿಕಾರಕ್ಕೆ ಬರಲು ನಮ್ಮ ವಿವಿಧ ಬೇಡಿಕೆಗಳನ್ನು ಕೊಡುವುದಾಗಿ ತಿಳಿಸಿತ್ತು. ಆದರೆ ಹಿಂದಿನ ಸರ್ಕಾರಗಳು ಅನುಸರಿಸಿದ ನೀತಿಗಳನ್ನೇ ಬಹಳ ವೇಗವಾಗಿ ಜಾರಿಗೊಳಿಸುತ್ತಾ, ದುಡಿಯುವವರ ಜೀವನವನ್ನು ಇನ್ನಷ್ಟು ಸಂಕಟಕ್ಕೆ ತಳ್ಳಿರುವುದು ಅತ್ಯಂತ ನೋವಿನ ವಿಚಾರ ಎಂದು ಜಿಲ್ಲಾ ಸದಸ್ಯೆ ಕಾಶಿಬಾಯಿ ಜನಗೊಂಡ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ಆಡಳಿತ ಸೌಧದ ಎದುರಿಗೆ ಪ್ರತಿಭಟನೆ ನಡೆಸಿ ಮಾತನಾಡಿ ಅವರು, ಪ್ರಸ್ತುತ ಆಧುನಿಕ ಸಮಾಜದಲ್ಲಿ ಪ್ರತಿಯೊಂದು ವಸ್ತುವಿನ ಬೆಲೆ ಏರಿಕೆಯಾಗುತ್ತಿದೆ. ಇದರಿಂದ ಅಗತ್ಯ ವಸ್ತುಗಳನ್ನು ಖರೀದಿಸಲು ಸಾಧ್ಯವಾಗುತ್ತಿಲ್ಲ. ಕಾರಣ ಸರಕಾರ ಬೇಗ ಎಚ್ಚೆತ್ತುಕೊಂಡು ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಹೊಸ ಪಿಂಚಣಿ ಯೋಜನೆ ವಿರೋಧಿಸಿ, ಹಳೇ ಪಿಂಚಣಿ ಯೋಜನ ಪುನರ್ ಸ್ಥಾಪಿಸಬೇಕೆಂಬ ಬೇಡಿಕೆಯನ್ನು ಕಡೆಗಣಿಸಲಾಗುತ್ತಿದೆ. ಇನ್ನು ಗ್ರಾಮೀಣ ಭಾಗದ ಕೃಷಿ ಕಾರ್ಮಿಕರು, ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರು, ಅಸಂಘಟಿತ ಕಾರ್ಮಿಕರ ಸ್ಥಿತಿ ಶೋಚನೀಯವಾಗಿದೆ. ಇದರಿಂದ ಡಿ.15–21ರವರೆಗೆ ದೇಶವ್ಯಾಪ್ತಿ ಪ್ರತಿಭಟನಾ ಸಪ್ತಾಹಕ್ಕೆ ಕರೆ ನೀಡಲಾಗಿದೆ.

ಇದೇ ಸಂದರ್ಭದಲ್ಲಿ ಮನವಿ ಸ್ವೀಕರಿಸಿ ಶಾಸಕ ಅಶೋಕ ಮನಗೂಳಿ ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಹಾಸ್ಟೆಲ್ ಕಾರ್ಮಿಕರು. ದುಡಿಯುವ ಜನರ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಆಲ್ ಇಂಡಿಯಾ ಯೂನೈಟೆಡ್ ಟ್ರೇಡ್ ಸೆಂಟ–ರ್ ಪ್ರತಿಭಟನೆ ಮಾಡುತ್ತಿರುವುದು ಕಾನೂನಾತ್ಮಕವಾಗಿದೆ. ಈ ಸಮಸ್ಯೆ ಕುರಿತಾಗಿ ಸಿಎಂ ಹಾಗೂ ಇದಕ್ಕೆ ಸಂಬಂಧಿಸಿದ ಸಚಿವರ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲು ಪ್ರಯತ್ನಿಸಿ ನಿಮ್ಮ ಬೇಡಿಕೆಗೆ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಎಐಯುಟಿಯುಸಿನ ಕಾರ್ಯಕರ್ತೆಯರಾದ ಮಾದೇವಿ ಧರ್ಮಶೆಟ್ಟಿ, ರಶ್ಮೀ ಗುತ್ತೇದಾರ, ಸರಸ್ವತಿ ಕೊಟ್ಯಾಳ, ಅಲ್ಲಮ್ಮ ಯರಗಲ್, ನಾಗಮ್ಮ ಎಮ್ಮಿ, ರೂಪಾ ಆಲಮೇಲ, ರೇಣುಕಾ, ರೂಪಾ ಗಣಿಹಾರ, ರೇಣುಕಾ ಈಳಗೇರ ಸೇರಿದಂತೆ ಅನೇಕ ಕಾರ್ಯಕರ್ತೆಯರು ಇದ್ದರು.

## ವಾಸುದೇವ ಇಗವೆಗೆ ಮಾನವ ರತ್ನ ಪ್ರಶಸ್ತಿ

**ಉದಯರಶ್ಮಿ ನ್ಯೂಸ್**



ಚಿಮ್ಮಡ: ಅರಣ್ಯ ಇಲಾಖೆಯಿಂದ ಬೆಳಗಾವಿ ಜಿಲ್ಲೆಯ ಘಟಪ್ರಭಾ ಪಕ್ಷಿಧಾಮದಲ್ಲಿ ಉತ್ತಮ ಕಾರ್ಯನಿರ್ವಹಿಸಿದಕ್ಕಾಗಿ ಗ್ರಾಮದ ವಾಸುದೇವ ಇಗವೆಯವರಿಗೆ ಮಾನವರತ್ನ ರಾಜ್ಯ ಪ್ರಶಸ್ತಿ ನೀಡಲಾಗಿದೆ.

ಮೈಸೂರಿನ ಮಾನವ ಹಕ್ಕುಗಳ ಸೇವಾ ಸಮೀತಿ ತನ್ನ ಏಳನೇಯ ವಾರ್ಷಿಕೋತ್ಸವದ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಬ್ರಹತ್ ಕಾರ್ಯಕ್ರಮದಲ್ಲಿ ಘಟಪ್ರಭಾ ಪಕ್ಷಿಧಾಮದಲ್ಲಿ ಕಳೆದ ಹಲವು ವರ್ಷಗಳ ಉತ್ತಮ ಸೇವೆಯನ್ನು ಪರಿಗಣಿಸಿ ಸೇವಾಕ್ಷೇತ್ರದ "ಮಾನವರತ್ನ" ಪ್ರಶಸ್ತಿ ನೀಡಿ ಗೌರವಿಸಿದೆ.

## ಪ್ರಧಾನ ಕಾರ್ಯದರ್ಶಿಯಾಗಿ ಮಾಯಣ್ಣವರ ಆಯ್ಕೆ

**ಉದಯರಶ್ಮಿ ನ್ಯೂಸ್**



ಚಿಮ್ಮಡ: ಶಫರ್ಡ ಇಂಡಿಯಾ ಇಂಟರನ್ಯಾಶನಲ್ ಸಂಘಟಣೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಇಲ್ಲಿನ ಗ್ರಾಪಂ ಸದಸ್ಯ ಮಹಾಲಿಂಗ ಮಾಯಣ್ಣವರರನ್ನು ನೇಮಕಗೊಳಿಸಲಾಗಿದೆ.

ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥರವರು ರಾಷ್ಟ್ರೀಯ ಅಧ್ಯಕ್ಷರಾಗಿರುವ ಈ ಸಂಘಟನೆಯಿಂದ ಇತ್ತೀಚೆಗೆ ಲೋಕಾಪುರದಲ್ಲಿ ನಡೆದ ಬ್ರಹತ್ ಸಮಾವೇಶದಲ್ಲಿ ಎಚ್ ವಿಶ್ವಣಾಥರವರು ಕಾಶೀನಾಥ ಹುಡೇದರನ್ನು ಜಿಲ್ಲಾಧ್ಯಕ್ಷರನ್ನಾಗಿ, ಮಹಾಲಿಂಗ ಮಾಯಣ್ಣವರರನ್ನು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳನ್ನಾಗಿ ನೆಮಕಗೊಳಿಸಿದ್ದಾರೆ.

# 'ಎಲ್ಲಾ ಮೆಂಬರ್ರು ಅಮಾನತ್ತಾದ್ರಲ್ಲಪಾ'

**ಉದಯರಶ್ಮಿ ದಿನಪತ್ರಿಕೆ**

'ಏನಪಾ ಗುಂಡಪ್ಪಾ ಏನು ಹೊಸದು ಐತಿ ಹೇಳಪಾ?' ಅಂತ ಬಂದ ಕಾಕಾ

'ಏನೂ ಇಲ್ಲ ಕಾಕಾ, ಚಾ ಹೆಳ್ಲೇನು?' ಅಂದ ಗುಂಡ್ಯಾ

'ಏ ಮೂಳ ಹಳೇ ಮೂಳ ಏನು ಹೊಸಾದು ಇಲ್ಲ? ಸುಳ್ಳ ಹೇಳ್ತಿ ಏನು?' ಅಂತ ದಬಾಯಿಸಿದ್ಲು ರಾಶಿ

ವ್ಯಂಗ್ಯೋಕ್ತಿ



– ಶ್ರೀನಿವಾಸ ಜಾಲವಾದಿ, ಸುರಪುರ

'ಏನೈತೆ ಹೇಳವಾ ನೀ?' ಅಂದ ಗುಂಡ್ಯಾ

'ದೀಡಸೇ ಮೆಂಬರ್ಗೋಳ್ನ ಅಮಾನತ್ತ ಮಾಡ್ಯಾರು' ಅಂದಳು ರಾಶಿ

'ಯಾವ ಮೆಂಬರಗಳು? ಪಂಚಾಯಿತಿದಾ?' ಅಂದ ಕಾಕಾ

'ಏ ಅಲ್ಲಪಾ ಕಾಕಾ, ಅವರು ಲೋಕಸಭಾ ರಾಜ್ಯಸಭಾ ಸದಸ್ಯರು' ಅಂದ ರಬಡ್ಯಾ

'ಏ ಅವರನ್ಯಾಕ ಸಸ್ಪೆಂಡ್ ಮಾಡ್ಯಾರು?' ಅಂದ ಶೌರಿ

'ಪಾರ್ಲಿಮೆಂಟದಾಗ ವೀಕ್ಷಕರ ಗ್ಯಾಲರಿಯಿಂದ ಜಿಗದು ಹೊಗಿ ಹಾಕಿದ್ರಲಾ ಗೊತ್ತೈತಿಲ್ಲ? ಅದರ ಬಗ್ಗೆ ಸ್ಟೇಟಮೆಂಟ್ ಕೊಡ್ರಿ ಅಂತ ವಿರೋಧ ಪಕ್ಷದವರು ಕೇಳ್ಯಾರ' ನಮೋ' ಅಂದಳು ರಾಣಿ

'ಆದ್ರ, ಇವರು ಇಲ್ಲೇ ಬಂದು ಹೇಳಿಕೆ ಕೊಡ್ರಿ ಅಂತ ಗದ್ದಲಾ ಎಬ್ಬಿಸ್ಯಾರು' ಅಂತ ಅಂದ ಗುಡುಮ್ಯಾ

'ಏ ಅದಕ್ಕಲ್ಲಾ, ಮೈಸೂರು ಎಂಪಿ ಆ ಜಿಗಿದವ್ರಿಗೆ ಪಾಸ್ ಕೊಟ್ಟಾನು, ಅವ್ನ ಡಿಸ್ಮಿಸ್ ಮಾಡ್ರಿ, ಅವನ ಬಗ್ಗೆ ವಿಚಾರಣಾ ಆಯೋಗ ನೇಮಸ್ರಿ ಅಂತ ಒತ್ತಾಯ ಮಾಡಿ, ಅಧಿವೇಶನ ನಡಿಲಿಕ್ಕೆ ಬಿಟ್ಟಿಲ್ಲ' ಅಂದಳು ರಾಣಿ

'ಅದಕ್ಕ ಯಾರ್ಯಾರು ಗದ್ಲಾ ಮಾಡಕತ್ತ್ಯಾರು ಅವರನೆಲ್ಲಾ ಔಟ್ ಮಾಡ್ಯಾರು' ಅಂತ ಶೌರಿ ಹೇಳಿದ

'ಈಗ ಅವರೆಲ್ಲ ಪಾರ್ಲಿಮೆಂಟ ಮುಂದ ಕುಂತು ಸ್ಟ್ರೈಕ್ ಮಾಡಾಕತ್ತಾರು' ಅಂದ ಗುಂಡ್ಯಾ

'ಟಗರ ಏನ ಅಂದ್ಯೆತಿ 'ಸಿಂಹ'ಕ್ಕ?' ಅಂತ ಕೇಳಿದ ಕಾಕಾ

'ಟಗರಿಗೆ ಮೊದ್ಲೆ 'ಸಿಂಹ'ದ ಮ್ಯಾಗ ಸಿಟ್ಟಿತ್ತು, ಈ ಟೈಮ್ನ್ಯಾಗ ಭೊಲೊತ್ನೆಂಗೆ ಗುಮ್ಮೇತಿ' ಅಂದ ಶೌರಿ

' ಮತ್ತ 'ಇಂಡಿಯಾ'ದಿಂದ ಖರ್ಗೆ ಸಾಹೇಬ್ರಿಗೆ ಪಿಎಂ ಕ್ಯಾಂಡಿಡೇಟ್ ಅಂತ ಮಾಡ್ಯಾರಂತಲಾ?' ಎಂದ ರಬಡ್ಯಾ

'ಹೋಯಿಂದು ಮಮತಾ ದೀದಿ & ಕೇಜ್ರಿ ಪ್ರಸ್ತಾಪ ಮಾಡ್ಯಾರು' ಅಂತ ರಾಶಿ ಅಂದಳು

'ಅಲ್ಲಾ, ಅವ್ರಿಗೆ ರಾಹುಲ ಪ್ರಿಯಾಂಕ ಬ್ಯಾಡ್ಯಾಗೇತೇನು?' ಅಂದ ಕಾಕಾ

'ಹೌದ್ದ ಮತ್ತ, ಅವರೆಲ್ಲ ಬರಬಾರದು ಅಂತೇ ಇವರನ್ನ ಮುನ್ನೆಲೆಗೆ ತಂದಾರ' ಅಂದ ಗುಡುಮ್ಯಾ

' ಅಂಧ್ರ, ಇದು ಮೊನ್ನಿ ಎಲೆಕ್ಷನ್ದು



ಅಂದ ಗುಡುಮ್ಯಾ

'ಸರಿಯಪಾ ಯಾರು ಕೊಡಬೇಕಂತ?' ಅಂದ ಗುಂಡ್ಯಾ

'ಅದೇ ಗೃಹಸಚಿವರಿಗೆ ಕೇಳ್ಯಾರು' ಅಂದಳು ರಾಶಿ

'ಶ್ಯಾಣ್ಯಾ'ರು ಏನು ಅಂದಾರು?' ಅಂದ ಶೌರಿ

'ಏ ಹಂಗೇನಿಲ್ಲ, ಎಲ್ಲಾ ನಾವು ಎನ್ಕೈರಿ ಮಾಡ್ತಿವಿ ಅಂತ ಹೇಳ್ಯಾರು ಎಫೆಕ್ಟೇನು?' ಅಂದಳು ರಾಶಿ

'ಮೊನ್ನೆ ಹಿಂದಿ ಬೆಲ್ಟಾಗ 'ಕೈ' ಬಿತ್ತಲಾ, ಅದರ ಪರಿಣಾಮ ಇದು' ಅಂತ ನಕ್ಕ ಗುಂಡ್ಯಾ

'ಎಲ್ಲಿ ಏನರೇ ಆಧ್ರ ಇಲ್ಲಿ ಹೀಂಗ ಆಕೈತೇನು ಅಂದ್ರ?' ಅಂತ ಆಶ್ಚರ್ಯದಿಂದ ಕೇಳಿದ ಕಾಕಾ

'ಹೌಂದಪಾ ಕಾಕಾ, ನಮೋ



ಶಾಣ್ಯಾರು ರಾಮ ಮಂದಿರ ಟ್ರಂಪ್ ಕಾರ್ಡ ಒಗದ್ರ, ಇವರು ಈ ಕಾರ್ಡ ಒಗದಾರು' ಅಂತ ಅಂದಳು ರಾಣಿ

' ಮತ್ತ ರೇಣು ಇದ್ರ ವಿಜಾಪುರದ ಹಿಂಹುಲಿಗಿ ಹುಚ್ಚನಾಯಿ ಅಂತ ಅಂದ್ಯೆತಲಾ?' ಅಂತಂದ ರಬಡ್ಯಾ

'ಹಿಂಹುಲಿ ಒಂದೇ ಸಮನೇ



ರಪರಪ ಅಂತೇಳಿ ಸಿಟ್ಟೂರಿಗೆ ಮತ್ತ ಅದರ ಮರಿಗೆ ಬಡಿಯೂದು ನೋಡಿ ತಾಪ ಆಗಿ ಹಂಗ ಅಂದೈತಿ' ಅಂತ ಅಂದ ಶೌರಿ

'ಐಸಾ ಬೋಲಕೆ, ಅದು ಚುಂಬೇಶ್ವರ ತನ್ನ ಸ್ಥಾನ ಗಟ್ಟಿ ಮಾಡ್ಕೋತೈತಿ ' ಅಂತ ಬಾಶಾ ನಕ್ಕ

'ಏನಲೇ ಯಪ್ಪಾ, ಅದು ಗಟ್ಟಿ ಮಾಡ್ಕೊಳ್ಳುದ್ರಾಗೇ ಹಿಂಹುಲಿ ಎಲ್ಲಾ ಅಂದ ಮುಗಿಸೇ ಬಿಟ್ಟೈತಲಾ?' ಎಂದ ಗುಂಡ್ಯಾ

' ಮತ್ತ ಹಿಂಹುಲಿ ಅಂದ್ರ ಸುಮ್ನೆ ಅಂತ ತಿಳಿದಿ ಏನು? ನಾ ಯಾ–ರಿಗೂ ಅಂಜು ಮಗಾ ಅಲ್ಲ, ನೀ ಅಂದ್ರ ನಿಮ್ಮಪ್ಪ ಅಂತೀನಿ, ನಿಮ್ಮ ಎಲ್ಲಾ ಹುಳಕ ಹೊರಗ ತಗದು, ನಿಮ್ಮ ಕಾರಸ್ತಾನ ವಂಶಾಡಳಿತ ಎಲ್ಲಾ ಬಟಾ ಬಯಲ ಮಾಡ್ತನಿ, ತಿಳ್ಕೋರಿ ಜರಾ ತಿಳ್ಕೋರಿ ಅಂತ ಗರ್ಜನೆ ಮಾಡೇತಿ' ಅಂತ

ಜೋಶ್ ದಿಂದ ಹೇಳಿದ ರಬಡ್ಯಾ

'ಅಸೋಕಾ ವಿಜಿಗೆ ಮಾಡಕ ಆಗದೇ ಇರೂದ್ನ ನಾನ ಮಾಡೀನಿ ಅಂತ ಅಂದತಿ ಹಿಂಹುಲಿ' ಎಂದ ಶೌರಿ

'ಬಂಡೆ ವಿರುದ್ಧ ಕೋರ್ಟನ್ಯಾಗ ಕೇಸ್ ಹಾಕಿದ ಗಂಡ್ಸ ನಾ ಒಬ್ನ ನೋಡು ಅಂತ ತೊಡೆ ತಟ್ಟೇತಿ ಹಿಂಹುಲಿ' ಅಂತ ನಕ್ಕ ಗುಡುಮ್ಯಾ

'ಬೆಳಗಾವಿ ಅಧಿವೇಶನ್ಯಾಗ ಬರೇ ಇಂಥಾ ತೊಡಿ ತಟ್ಟೂದ ಆತ ನೋಡು ' ಅಂದ ರಬಡ್ಯಾ

'ಒಂದಿನ ಬರ ಬಿದ್ದ ಬಗ್ಗೆ ಚರ್ಚೆ ಆಗ್ಲಿಲ್ಲಾ, ಬಡವರು ಹ್ಯಾಂಗ ಬದಕಬೇಕು ಅಂಬೋದರ ಬಗ್ಗೆ ನಯಾಪೈಸೆ ಮಾತಾಡ್ಲಿಲ್ಲ ಯಾರು?' ಅಂದಳು ರಾಶಿ

'ಇದ್ದಿದ್ದರಾಗೆ ಆ ಗುರುಮಿಟ್ಕಲ್ಲ ಎಂಎ[illegible] ಒಂದಿಟು ಮಾತಾಡಿದ್ನಪಾ, ಸ್ವಾತಂತ್ರ್ಯ ಬಂದು 75 ವರ್ಷ ಆದ್ರೂನು ಕೂಡ ಇನ್ನಾ ಹಳ್ಳ್ಯಾಗ ಶುದ್ಧ ಕುಡಿಯೂ ನೀರ ಜನರಿಗೆ ಸಿಗಂಗಿಲ್ಲಂಧ್ರ ಹ್ಯಾಂಗ? ಇದೆಲ್ಲಾ ನಾವು ತಲಿ ತಗ್ಗಸೂ ವಿಚಾರ ಅಂತ ಹೇಳಿದ್ನಪಾ' ಅಂದಳು ರಾಣಿ

'ಹಿಂಗೆ ಎಲ್ಲಾರೂ ವಿಚಾರ ಮಾಡಿ, ಜನರಿಗೆ ನೀರು,ಶಾಲೆ, ಆಹಾರ, ವಸತಿ ಒದಗಿಸಿದಂಧ್ರ ಜನರ ಬಾಳು ಬಂಗಾರ ಆಕೈತಿ' ಅಂದಳು ರಾಶಿ

'ಏ ಹಂಗೆಲ್ಲಾ ಆಗಂಗಿದ್ರ ಹಿಂಗ್ಯಾಕ ಇರ್ತಿತ್ತು ಜನರ ಬಾಳೆ ?' ಅಂದ ಕಾಕಾ ಬೇಸರದಿಂದ

'ಅವರಿಗೆ ಜನರ ನೆಮ್ಮದಿ ಬೇಕಿಲ್ಲ, ಅವರಿಗೆ ತಮ್ಮ ಮುಂದಿನ ಪೀಳಿಗೆಯ ರಾಜಕೀಯ ಭವಿಷ್ಯದ ಚಿಂತಿ ಮಾತ್ರ ಐತಿ' ಅಂತ ಷರಾ ಎಳೆದ ರಬಡ್ಯಾ

'ಅಲ್ಲಾ ಹಿಂತಾ ಜಮಾನಾದಾಗೂ ಹೆಣ್ಮಕ್ಕಳ್ನ ಬೆತ್ತಲೆ ಮಾಡಿ ಹೊಡಿತಾರಂತಂಧ್ರ, ನಾವಿನ್ನಾ ಎಲ್ಲಿ ಅದೀವಿ?' ಅಂತಂದ ಕಾಕಾ

'ಜನ್ರಿಗಿ ಬುದ್ಧಿ ಬರಂಗಿಲ್ಲ ತಗಿ, ದೇಶದ ಕಾನೂನ ಬಗ್ಗೆ ಅಂಜಿಕಿ ಇಲ್ಲಾ, ಏನ ಮಾಡಿದ್ರೂ ನಡಿತೈತಿ ನಮ್ಮನ್ನ ಕೇಳವ್ರ ಯಾರ ಅದಾರು ಅಂತ ತಿಳ್ಕೊಂಡತಿ ಒಂದಷ್ಟು ಮೂರ್ಖ ಮಂದಿ' ಅಂತ ಅಂ–ದಳು ರಾಣಿ

'ನಡ್ರೇಪಾ ಎಲ್ಲಾರೂ ಚಾ ಕುಡದು, ಬಿಗ್ಬಾಸ್ದಾಗ ಕುಸ್ತಿ ಆಡಕಂತಾರು, ಸರಿಗಮಪ ದಾಗ ಮಸ್ತ ಮಸ್ತ ಹಾಡಾ ಹಾಡಕತ್ತಾರು ಅಲ್ಲಿ ನೋಡಾಕ ಹೋಗೂಮು ಬರ್ರಿ, ಯಾಕಂಧ್ರ ಇದು ಹಗ್ಗ ಹರೆಂಗಿಲ್ಲ ಕೋಲ ಮುರೆಂಗಿಲ್ಲ ರೀತಿ ಐತಿ ಬರ್ರಿ' ಅಂತ ಶೌರಿ ಮತ್ತ ಬಾಶಾ ಎಲ್ಲಾನ್ರೂ ಕರ್ಕೊಂಡ ಹೊಂಟ್ರು

# ವೃಕ್ಷೋಥಾನ್ ಹೆರಿಟೇಜ್ ರನ್ ಪ್ರೋತ್ಸಾಹಿಸಲು ಕಲಾ ಪ್ರದರ್ಶನ

**ಉದಯರಶ್ಮಿ ನ್ಯೂಸ್**

ವಿಜಯಪುರ: ಪರಿಸರ ಮತ್ತು ಪ್ರಾಚೀನ ಸ್ಮಾರಕಗಳ ಸಂರಕ್ಷಣೆ ಹಾಗೂ ಜಾಗೃತಿ ಮತ್ತು ಶತಮಾನದ ಸಂತ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳ ಗೌರವಾರ್ಥ ಡಿಸೆಂಬರ್ 24 ರಂದು ನಗರದಲ್ಲಿ ನಡೆಯಲಿರುವ ವೃಕ್ಷೋಥಾನ್ ಹೆರಿಟೇಜ್ ರನ್–2023 ಕಾರ್ಯಕ್ರಮಕ್ಕೆ ಸಾಂಸ್ಕೃತಿಕ ತಂಡಗಳ ಕಲಾ ಪ್ರದರ್ಶನ ನೀಡಲಿದ್ದು ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಲಿವೆ.

ಓಟ ನಡೆಯಲಿರುವ ಡಿಸೆಂಬರ್ 24 ರಂದು ರವಿವಾರ ಬೆಳಿಗ್ಗೆ 6 ಗಂಟೆಯಿಂದ 9 ಗಂಟೆಯವರೆಗೆ ಈ ಕಲಾ ತಂಡಗಳು 16 ನಾನಾ ಭಾಗಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸುತ್ತ ಓಟದಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳಿಗೆ ಉತ್ತೇಜನ ನೀಡಲಿವೆ. ವೃಕ್ಷೊಥಾನ್ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಗಣ್ಯರು ಈ ಕಲಾ ತಂಡಗಳಿಗೆ ಮಾರ್ಗದರ್ಶನ ಮಾಡುತ್ತಿದ್ದು, ಒಟ್ಟಾರೆ ಸುಮಾರು 150 ಜನ ಕಲಾವಿದರು ಈ ತಂಡಗಳಲ್ಲಿದ್ದಾರೆ ಎಂದು ವೃಕ್ಷೊಥಾನ್ ಹೆರಿಟೇಜ್ ರನ್–2023 ಸಮಿತಿಯ ಕೋರ್ ಕಮಿಟಿ ಸಾಂಸ್ಕೃತಿಕ ವಿಭಾಗದ ಶಿವನಗೌಡ ಪಾಟೀಲ ಮತ್ತು ಸೋಮು ಎಸ್. ಮಠ ತಿಳಿಸಿದ್ದಾರೆ.

ಕಲಾ ತಂಡಗಳು ಮತ್ತು ಅವುಗಳು ಓಟಗಾರರಿಗೆ ಸ್ಪೂರ್ತಿ ತುಂಬಲು ನಿಗದಿ ಪಡಿಸಿರುವ ಸ್ಥಳದ ಮಾಹಿತಿ ಇಲ್ಲಿದೆ.

1.ಕಾಖಂಡಕಿ ಬಾಜಾ ತಂಡ: ಡಾ. ಬಿ. ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಿಂದ ಓಟ ಪ್ರಾರಂಭವಾಗುವ ಸ್ಥಳದಲ್ಲಿ ತಮ್ಮ ಕಲೆ ಪ್ರದರ್ಶನ ನೀಡಲಿದ್ದಾರೆ. ಎಂಟು ಜನರ ತಂಡ ಇದಾಗಿದೆ.

2.ಇಂಡಿಯ ನಗಾರಿ ತಂಡ: ನಗಾರಿ ತಂಡ ಇಬ್ಬರು ಸದಸ್ಯರು ಡಾ. ಬಿ. ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಿಂದ ಓಟ ಪ್ರಾರಂಭವಾಗುವ ಸ್ಥಳದಲ್ಲಿ ಇಬ್ಬರು ಕಲಾವಿದರು ನಗಾರಿ ಬಾರಿಸಲಿದ್ದಾರೆ.

3.ಸಾರವಾಡದ ಗೊಂಬೆ ಕುಣಿತ ತಂಡ: 19 ಜನರ ಈ ತಂಡ ಕೂಡ ಡಾ. ಬಿ. ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಿಂದ ಓಟ ಪ್ರಾರಂಭವಾಗುವ ಸ್ಥಳದಲ್ಲಿ ತಮ್ಮ ಕಲೆ ಪ್ರದರ್ಶಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾರ್ಗದರ್ಶನದಲ್ಲಿ ಈ ಗೊಂಬೆ ಕುಣಿತ ನಡೆಯಲಿದೆ.

4.ಸಚಿನ ಭಜಂತ್ರಿ ಬ್ಯಾಂಜೋ ವಾದ್ಯ: ಎಂಟು ಜನ ಬ್ಯಾಂಜೋ ಕಲಾವಿದರು ವೃಕ್ಷೊಥಾನ್ ಮ್ಯಾರಾಥ–ಾನ್ ಓಟಗಾರರು ಸಾಗುವ ಕಾಮತ ಹೊಟೇಲ್ ಬಳಿ ಬ್ಯಾಂಜೋ ನುಡಿಸಲಿದ್ದಾರೆ.

5.ಹುಲಿ ಕುಣಿತ ಮತ್ತು ವಾದ್ಯ ಮೇಳ: ನಗರದ ಗೋಲಗುಂಬಜ ಮುಂಭಾಗದಲ್ಲಿ ಮಹಾನಗರ ಪಾಲಿಕೆ ಸದಸ್ಯ ದಿನೇಶ ಹಳ್ಳಿ ಅವರ ಮಾರ್ಗದರ್ಶನದಲ್ಲಿ ಹುಲಿ ಕುಣಿತ ಮತ್ತು ವಾದ್ಯ ಮೇಳ ತಂಡದ ಕಲಾವಿದರು ಓಟಗಾರರಿಗೆ ಸ್ಪೂರ್ತಿ ತುಂಬಲಿದ್ದಾರೆ.

6.ಡೊಳ್ಳು ಕುಣಿತ: ನಗರದ ಬಸವೇಶ್ವರ ಚೌಕಿನ ಬಳಿ ಸ್ಪೂರ್ತಿ ಫೌಂಡೇಶನ್ ನ ಅರುಣ ಹುಂಡೇಕಾರ ಅವರು 12 ಜನ ಡೊಳ್ಳು ಕುಣಿತ ತಂಡದವರನ್ನು ಕರೆಯಿಸಿ ಡೊಳ್ಳು ಬಾರಿಸುವ ಮೂಲಕ ಕ್ರೀಡಾಪಟುಗಳಿಗೆ ಓಡಲು ಉತ್ತೇಜನ ನೀಡಲಿದ್ದಾರೆ.

7.ಮುಂಬೈ ಮಹಿಳಾ ತಂಡದಿಂದ ಚಿಯರ್ ಅಪ್ ನೃತ್ಯ: ಗಾಂಧಿ ಚೌಕಿನಲ್ಲಿ ಮುಂಬೈನ ಖ್ಯಾತ ಮಹಿಳಾ ಕಲಾ ತಂಡದ ಆರು ಜನರ ತಂಡ ಓಟಗಾರ–ರಿಗೆ ಚಿಯರ್ ಅಪ್ ಮಾಡುವ ನೃತ್ಯ ಮಾಡಲಿದ್ದಾರೆ.

8.ವಿಶೇಷ ಹಲಗಿ ವಾದ್ಯ: ಶಿವಾಜಿ ಚೌಕ್ ನಲ್ಲಿ ಓಟಗಾರನ್ನು ಹುರುದುಂಬಿಸಲು ಮಹಾನಗರ ಪಾಲಿಕೆ ಮಾಜಿ ಕಾರ್ಪೊರೇಟರ್ ಉಮೇಶ ವಂದಾಲ ಮತ್ತು ತಂಡದವರು ವಿಶೇಷ ಹಲಗಿ ವಾದ್ಯ ನುಡಿಸುವ ಮೂಲಕ ಮೆರಗು ನೀಡಲಿದ್ದಾರೆ.

9.ವಿಶೇಷ ಕಲಾ ತಂಡಗಳಿಂದ ವಾದ್ಯ ಮತ್ತು ನೃತ್ಯ: ನಗರದ ವಾಟರ್ ಟ್ಯಾಂಕ್ ಬಳಿ ಎಪಿ ಗ್ರುಪ್ ವತಿಯಿಂದ ಓಟಗಾರರಿಗೆ ಚಿಯರ್ ಅಪ್ ಮಾಡಲು ವಿಶೇಷ ಕಲಾ ತಂಡಗಳಿಂದ ವಾದ್ಯ ಮತ್ತು ನೃತ್ಯ ಪ್ರದರ್ಶನ ನಡೆಯಲಿದೆ.

10.ಸೈನಿಕ ಶಾಲೆಯ ವಿದ್ಯಾರ್ಥಿಗಳಿಂದ ನೃತ್ಯ: ನಗರದ ಸೈನಿಕ ಶಾಲೆಯಲ್ಲಿ ಸೈನಿಕ ಶಾಲೆಯ ವಿದ್ಯಾರ್ಥಿಗಳು ಓಟಗಾರರನ್ನು ಪ್ರೋತ್ಸಾಹಿಸಲು ವಿಶೇಷ ನೃತ್ಯ ಮಾಡಲಿದ್ದಾರೆ.

11.ಬ್ಯಾಂಜೋ ವಾದ್ಯ: ನಗರದ ಸೋಲಾಪುರ ರಸ್ತೆಯಲ್ಲಿರುವ ಬಿ.ಎಲ್.ಡಿ.ಇ ಕಾಲೇಜಿನ ಮುಖ್ಯದ್ವಾರದ ಬಳಿ ಲಕ್ಷ್ಮಣ ಭಜಂತ್ರಿ ಸೇರಿದಂತೆ 10 ಮತ್ತು ತಂಡದವ–ರಿಂದ ಬ್ಯಾಂಜೋ ವಾದ್ಯ ನುಡಿಸುವ ವ್ಯವಸ್ಥೆ ಮಾಡಲಾಗಿದೆ.

12.ಕಾಲೇಜು ವಿದ್ಯಾರ್ಥಿಗಳಿಂದ ಪ್ರೋತ್ಸಾಹಿಕ ನೃತ್ಯ: ನಗರದ ಸೋಲಾಪುರ ರಸ್ತೆಯಲ್ಲಿರುವ ಬಿ.ಎಲ್.ಡಿ.ಇ ಕಾಲೇಜಿನ ಕ್ಯಾಂಪಸ್ ನಲ್ಲಿ ನಾನಾ ಕಾಲೇಜಿನ ವಿದ್ಯಾರ್ಥಿಗಳು ಓಟಗಾರರಿಗೆ ಪ್ರೋತ್ಸಾಹಿಸಲು ವಿಶೇಷ ನೃತ್ಯ ಮಾಡುತ್ತಿದ್ದಾರೆ.

13.ಕನಾಳ ಕಲಾ ತಂಡದಿಂದ ಡೊಳ್ಳು ಕುಣಿತ: ಕನಾಳ ಗ್ರಾಮದ 12 ಜನರ ಡೊಳ್ಳು ಕುಣಿತ ತಂಡ ಬಿ.ಎಲ್.ಡಿ.ಇ ಎಂಜಿನಿಯರಿಂಗ್ ಕಾಲೇಜಿನ ಬಳಿ ಡೊಳ್ಳು ಕುಣಿತ ಕಲೆಯನ್ನು ಪ್ರದರ್ಶಿಸಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

14.ವಚನ ಗಾಯನ: ನಗರದ ಜ್ಞಾನಯೋಗಾಶ್ರಮದಲ್ಲಿ ಮ್ಯಾರಾಥ–ಾನ್ ಓಟಗಾರರನ್ನು ಪ್ರೋತ್ಸಾಹಿಸಲು ವಚನ ಗಾಯನ ನಡೆಯಲಿದೆ.

15.ಹಲಗಿ ವಾದ್ಯ: ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದ ಬಳಿ ಭೂತನಾಳದ ಅಶೋಕ ವಾಲಿಕಾರ ತಂಡದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಲಗಿ ವಾದ್ಯ ನಡೆಯಲಿದೆ.




16.ಜುಂಬಾ ಡ್ಯಾನ್ಸ್: ಬಿ. ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದ ಒಳಾಂಗಣದಲ್ಲಿ ರೀಟಾ ಕನಮಡಿ ಮತ್ತು ಸಾವಿತ್ರಿ ಡವಳೇಶ್ವರ ತಂಡದಿಂದ ಓಟಗಾರರಿಗೆ ಮತ್ತು ಸಾರ್ವಜನಿಕರಿಗೆ ಚಿಯರ್ ಅಪ್ ಮಾಡಲು ಜುಂಬಾ ಡ್ಯಾನ್ಸ್ ನಡೆಯಲಿದೆ.

ಅಲ್ಲದೇ, ಈ ಕಾರ್ಯಕ್ರಮ ನಡೆಯುವ ಮೂರೂವರೆ ಗಂಟೆಗಳ ಕಾಲ ವಿಜಯಪುರ ನಗರದಲ್ಲಿ ನಾನಾ ಕಲಾ ತಂಡಗಳು ತಮ್ಮ ಕಲಾ ಪ್ರದರ್ಶನ ನಡೆಸಲು ಹಾಗೂ ಜನರಲ್ಲಿ ಸಾಂಸ್ಕೃತಿಕ ಕಲೆಗಳನ್ನು ಉಣಬಡಿಸಲು ಸಮಿತಿಯ ವೃಕ್ಷೊಥಾನ್ ಹೆರಿಟೇಜ್ ರನ್–2023 ಸಮಿತಿಯ ಸಾಂಸ್ಕೃತಿಕ ವಿಭಾಗದ ಸದಸ್ಯರಾದ ಅಮೀತ ಬಿರಾದಾರ, ಡಾ. ಪ್ರವೀಣ ಚೌರ್, ಮುತ್ತಣ್ಣ ಬಿರಾದಾರ, ರಾಮು ಅಂಕಲಗಿ, ಅನೀಲ ಧಾರವಾಡಕರ, ಶ್ರೀಕಾಂತ ಮಂತ್ರಿ ಹಾಗೂ ಸಿದ್ದು ನಾಯ್ಕೋಡಿ ನಿರತರಾಗಿದ್ದಾರೆ.

# ವಿದ್ಯಾರ್ಥಿಗಳ ಚಿತ್ತ ಸತತ ಓದಿನತ್ತ ಇರಲಿ: ಶಾಸಕ ಮನಗೂಳಿ

**ಉದಯರಶ್ಮಿ ನ್ಯೂಸ್**

ಸಿಂದಗಿ: ವಿದ್ಯಾರ್ಥಿಗಳು ಮಹಾವಿದ್ಯಾಲಯದಲ್ಲಿ ದೊರೆಯುವ ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರಾಧ್ಯಾಪಕರ ಉತ್ತಮ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಬೇಕು ಎಂದು ಸಂಸ್ಥೆಯ ಅಧ್ಯಕ್ಷ ಶಾಸಕ ಅಶೋಕ ಮನಗೂಳಿ ಹೇಳಿದರು.

ಪಟ್ಟಣದ ತಾಲೂಕು ಶಿಕ್ಷಣ ಪ್ರಸಾರಕ ಮಂಡಳಿಯ ಅಂಗ ಸಂಸ್ಥೆಯಾದ ಸಿ.ಎಂ. ಮನಗೂಳಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ ಮಹಾವಿದ್ಯಾಯಲದಲ್ಲಿ ನಡೆದ ಪದವಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಮುಂದಿನ ಜೀವನ ರೂಪಿಸಿಕೊಳ್ಳಲು ಪದವಿ ಹಂತದ ಶಿಕ್ಷಣವು ಸುಭದ್ರವಾದ ತಳಪಾಯ. ಆದ್ದರಿಂದ ವಿದ್ಯಾರ್ಥಿಗಳು ನಿರಂತರ ಓದಿನತ್ತ ಚಿತ್ತ ಹರಿಸಬೇಕು ಎಂದರು.

ಈ ವೇಳೆ ಕಾರ್ಯಕ್ರಮದ ಮುಖ್ಯ ಅತಿಥಿ, ನಿವೃತ್ತ ಪ್ರಾಧ್ಯಾಪಕ ಬಿ.ಎನ್. ಪಾಟೀಲ ಇಬ್ರಾಹಿಂಪೂರ ಮಾತನಾಡಿ, ವಿದ್ಯಾರ್ಥಿಗಳಿಗೆ ಓದಿನ ಮೇಲಿನ ಶ್ರದ್ಧೆ ಹೆಚ್ಚಾಗಬೇಕಾದರೆ ಸಂತರ, ಶರಣರ, ಸತ್ಪುರುಷರ ಬದುಕಿನ ಜೀವನ ಚರಿತ್ರೆಗಳನ್ನು ಅರಿತುಕೊಂಡು ಅವರ ತತ್ವಾದರ್ಶಗಳನ್ನು ನಮ್ಮ ಬದುಕಿನಲ್ಲಿ ಮೈಗೂಡಿಸಿಕೊಂಡಾಗ ಮಾತ್ರ ಸಾಧ್ಯವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಶ್ರೀಕಾಂತ ಕೆಂಧೂಳಿ, ಪ್ರಾಚಾರ್ಯ ಡಾ.ಬಿ.ಜಿ.ಪಾಟೀಲ ಮಾತನಾಡಿದರು.



ಕಾರ್ಯಕ್ರಮವನ್ನು ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷ ರಾಹುಲ್ ಕಾಂಬಳೆ ಸ್ವಾಗತಿಸಿದರು. ಶ್ರೀಶೈಲ ಜವಾದಾರ್ ನಿರೂಪಿಸಿದರು. ಐ.ಕ್ಯೂ.ಎ.ಸಿ ಸಂಯೋಜಕ, ದೈಹಿಕ ನಿರ್ದೇಶಕ ಡಾ.ಅಂಬರೀಶ ಬಿರಾದಾರ ವಂದಿಸಿದರು.

ಸತೀಶ ಬಿರಾದಾರ, ಬಿ.ಡಿ.ಮಾಸ್ತಿ, ಜಿ.ಜಿ.ಕಾಂಬಳೆ, ಎಸ್.ಕೆ.ಹೂಗಾರ, ವ್ಹಿ.ಬಿ.ಪಾಟೀಲ ಹಾಗೂ ರಮೇಶ ಯಂಕಂಚಿಕರ ಸೇರಿದಂತೆ ಮಹಾವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಪರಾಧ ತಡೆಗಟ್ಟುವಲ್ಲಿ ಸಾರ್ವಜನಿಕರ ಪಾತ್ರ ಮುಖ್ಯ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಸಮಾಜದಲ್ಲಿ ಅಪರಾಧಗಳು ನಡೆಯದಂತೆ ತಡೆಗಟ್ಟುವಲ್ಲಿ ಸಾರ್ವಜನಿಕರ ಪಾತ್ರ ಬಹುಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು, ಯುವಜನಾಂಗ,ವಿದ್ಯಾರ್ಥಿಗಳು ಪೊಲೀಸ್ ಇಲಾಖೆಯೊಂದಿಗೆ ಸಹಕ–ರಿಸಬೇಕೆಂದು ಬಸವನಬಾಗೇವಾಡಿ ಪೊಲೀಸ್ ಠಾಣೆಯ ಪಿಎಸೈ ಶರಣಗೌಡ ನ್ಯಾಮಣ್ಣನವರ ಹೇಳಿದರು.



ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಪರಾಧ ತಡೆ ಮಾಸಾಚರಣೆಯಲ್ಲಿ ಮಾತನಾಡಿದ ಅವರು, ಇಂದು ಸಮಾಜದಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ಸಾರ್ವಜನಿಕರ ಉದಾಸೀನತೆಯೂ ಒಂದು ಮುಖ್ಯ ಕಾರಣವಾಗಿದೆ. ಪ್ರತಿಯೊಬ್ಬರೂ ಸಾರ್ವಜನಿಕ ಬದುಕಿನಲ್ಲಿ ತುಂಬಾ ಜಾಗೃತರಾಗಿರಬೇಕು. ಇಂದು ದೈಹಿಕ ಅಪರಾಧ, ಆಸ್ತಿ ಅಪರಾಧ, ವಿದ್ಯುನ್ಮಾನ ಅಪರಾಧ ಎಂಬ ಬಗೆಯ ಅಪರಾಧಗಳು ಹೆಚ್ಚುತ್ತಿವೆ. ಈ ಮೂರು ಅಪರಾಧಗಳಲ್ಲಿ ಒಂದಾಗಿರುವ ವಿದ್ಯುನ್ಮಾನ ಅಪರಾಧಗಳಲ್ಲಿ ಮಹಿಳೆಯರೇ ಹೆಚ್ಚು ಬಲಿಯಾಗುತ್ತಿರುವುದು ವಿಷಾದಕರ ಸಂಗತಿ. ಪ್ರಜ್ಞಾವಂತ ನಾಗರಿಕರು ಪೊಲೀಸ್ ಇಲಾಖೆಯೊಂದಿಗೆ ಸಂಪರ್ಕದಲ್ಲಿದ್ದರೆ ಮುಂದೆ ಸಂಭವಿಸುವ ದುರಂತಗಳನ್ನು ತಡೆಗಟ್ಟಬಹುದು ಎಂದರು.

ಅಪರಾಧ ಚಟುವಟಿ–ಕೆಗಳನ್ನು ನಿಯಂತ್ರಿಸಿ ಉತ್ತಮ ಸಮಾಜವನ್ನು ನಿರ್ಮಿಸಲು ಪೊಲೀಸ್ ಇಲಾಖೆಯೊಂದಿಗೆ ಸಮಾಜ ಸದಾ ಸಹಕರಿಸಬೇಕು. ರಸ್ತೆಯಲ್ಲಿ ಸಂಚ–ರಿಸುವಾಗ ಪ್ರತಿಯೊಬ್ಬರೂ ರಸ್ತೆಯ ನಿಯಮಗಳನ್ನು ಪಾಲಿಸಿದರೆ ರಸ್ತೆ ಅಪಘಾತಗಳನ್ನು ತಡೆಗಟ್ಟಬಹುದು. ವಾಹನ ಚಾಲಕರು ಜೀವ ರಕ್ಷಕ ಸಾಧನಗಳನ್ನು ಧರಿಸಬೇಕು. ನಮ್ಮ ಇಲಾಖೆಯು ಸದಾಕಾಲ ನಿಮ್ಮ ಜೊತೆಯಲ್ಲಿದ್ದು ಸಮಾಜದ ರಕ್ಷಣೆಗೆ ಸದಾ ಬದ್ಧವಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎ.ವ್ಹಿ.ಸೂರ್ಯವಂಶಿ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ಪಾಲಕರಿಗೆ ಒಳ್ಳೆಯ ಮಗ, ಸಮಾಜಕ್ಕೆ ಆದರ್ಶ ನಾಗರಿಕ, ದೇಶದ ಆಸ್ತಿಯಾಗುವುದಕ್ಕಾಗಿ ಪೊಲೀಸ್ ಇಲಾಖೆಯು ನೀಡುವ ಸಲಹೆ–ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿದರೆ ಜರಗಲಿರುವ ದುರ್ಘಟನೆಗಳನ್ನು ತಡೆಯುವಂತಾಗುತ್ತದೆ ಎಂದರು.

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಆರ್.ಎ.ಪವಾರ ಅವರು ರಸ್ತೆ ಅಪಘಾತದ ವೈಜ್ಞಾನಿಕ ಕಾರಣಗಳ ಕುರಿತು ಮಾತನಾಡಿದರು.

ಪ್ರೊ.ಜೆ.ಎಸ್.ದಾವಣಗೇರಿ ನಿರೂಪಿಸಿ, ವಂದಿಸಿದರು.

# ಡಿ.22ರಂದು ಮರಗಮ್ಮದೇವಿ ದೇವಸ್ಥಾನ ಉದ್ಘಾಟನೆ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ ತಾಲೂಕಿನ ಮುಳ್ಳಾಳ ಗ್ರಾಮದಲ್ಲಿ ನಿರ್ಮಾಣಗೊಂಡಿರುವ ನೂತನ ಮರಗಮ್ಮದೇವಿ ದೇವಸ್ಥಾನ.



ಬಸವನಬಾಗೇವಾಡಿ, ಡಿ. 20

ತಾಲೂಕಿನ ಮುಳ್ಳಾಳ ಗ್ರಾಮದಲ್ಲಿ ಡಿ. 22 ರಂದು ಬೆಳಗ್ಗೆ 9.30 ಗಂಟೆಗೆ ಮರಗಮ್ಮದೇವಿ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಸಮಾರಂಭದ ಸಾನಿಧ್ಯವನ್ನು ಡೋಣೂರ ಕಟ್ಟಿಮನಿ ಹಿರೇಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಸಹ ಸಾನಿಧ್ಯವನ್ನು ಮಳಸಿದ್ದಯ್ಯ ಹಿರೇಮಠ ವಹಿಸುವರು. ಜವಳಿ ಮತ್ತು ಕಬ್ಬು ಅಭಿವೃದ್ಧಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ವಿಡಿಸಿಸಿ ಬ್ಯಾಂಕಿನ ನಿರ್ದೇಶಕ ಚಂದ್ರಶೇಖರಗೌಡ ಪಾಟೀಲ ವಹಿಸುವರು. ರಾಜ್ಯ ಸಹಕಾರ ಮಹಾಮಂಡಳಿ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ ಜ್ಯೋತಿ ಬೆಳಗಿಸುವರು. ಅತಿಥಿಗಳಾಗಿ ನಿವೃತ್ತ ಶಿಕ್ಷಕ ಎಸ್.ಎಸ್.ಮಂಗಾನವರ, ಡೋಣೂರ ಗ್ರಾಪಂ ಅಧ್ಯಕ್ಷ ಚನ್ನುಗೌಡ ಬಿರಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ಎಪಿಎಂಸಿ ಮಾಜಿ ನಿರ್ದೇಶಕ ಬಸವರಾಜ ಸೋಂಪೂರ, ತಾಪಂ ಮಾಜಿ ಉಪಾಧ್ಯಕ್ಷ ರಾಹುಲ ಕುಬಕಡ್ಡಿ, ಯುವಮುಖಂಡ ನಾಗರಾಜ ಗುಂದಗಿ, ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ರವಿ ಭಾವಿಕಟ್ಟಿ, ತಾಪಂ ಮಾಜಿ ಸದಸ್ಯರಾದ ರಾಜೇಶ್ವರಿ ಕೋಟನೂರ, ಲಕ್ಕಪ್ಪ ಚಿರ್ಚನಕಲ್, ಡೋಣೂರ ಗ್ರಾಪಂ ಮಾಜಿ ಅಧ್ಯಕ್ಷ ರವಿ ಮ್ಯಾಗೇರಿ, ಡೋಣೂರ ಗ್ರಾಪಂ ಸದಸ್ಯರಾದ ಶಂಕ್ರೆಪ್ಪ ಹಲ್ಲೂರ, ರಾಜನಬಿ ಹಿಪ್ಪರಗಿ, ವಿಜಯಲಕ್ಷ್ಮೀ ಬಿರಾದಾರ, ಅಬ್ದುಲ ಮುಲ್ಲಾ, ಪಿಕೆಪಿಎಸ್ ಬ್ಯಾಂಕಿನ ಅಧ್ಯಕ್ಷ ಗೋಲಪ್ಪ ಕೊರೂಟಗಿ, ಉಪಾಧ್ಯಕ್ಷ ಗುರುನಗೌಡ ಭಾವಿಕಟ್ಟಿ, ಪಿಕೆಪಿ–ಎಸ್ ಮಾಜಿ ಅಧ್ಯಕ್ಷರಾದ ಎನ್.ಎಸ್.ಕಾಖಂಡಕಿ, ಅಶೋಕಗೌಡ ಪಾಟೀಲ, ಮುಖಂಡರಾದ ಮಲ್ಲಿಕಾರ್ಜುನ ಪಡಗಾನೂರ, ಕಲ್ಲನಗೌಡ ಬಿರಾದಾರ, ವಸಂತ ಹಂಡಿ, ರಾಮನಗೌಡ ಪಾಟೀಲ, ವಕೀಲ ಎನ್.ಜಿ.ಕಾಗವಾಡ, ಕೌಶಲ್ಯ ಅಭಿವೃದ್ಧಿ ಇಲಾಖೆಯ ಡಾ.ಶ್ರೀಧರ ಮುಳ್ಳಾಳ, ಮಹಿಳಾ ವಿವಿಯ ಡಾ.ಗೀತಾ ಮುಳ್ಳಾಳ ಆಗಮಿಸುವರು.

ಇದೇ ಸಂದರ್ಭದಲ್ಲಿ ಗ್ರಾಮದ ಯೋಧರಾದ ಕಮಲಸಾ ನದಾಫ, ಗೌತಮ ಮುಳ್ಳಾಳ, ಅವ್ವಪ್ಪ ಮುಳ್ಳಾಳ ಅವರನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

**ವ್ಯಕ್ತಿತ್ವ ವಿಕಸನ ಮಾಲೆ.. 30**

# ಸ್ವಯಂ ಸ್ಫೂರ್ತಿಯ ಕಡಲು ನಮ್ಮ ಅಂಗೈಯಲ್ಲೇ ಇದೆ!

**ಜಯ್‌ನುಡಿ**



● ಜಯಶ್ರೀ.ಜೆ.ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು, ಬೆಳಗಾವಿ
9449234142


ಏಕೋ ಏನೋ ಗೊತ್ತಿಲ್ಲ, ಯಾವುದೇ ಕೆಲಸದಲ್ಲೂ ಆಸಕ್ತಿಯೇ ಇಲ್ಲ. ಹೇಗೋ ಮನಸ್ಸಿಗೆ ಒಪ್ಪಿಸಿ ಹುಮ್ಮಸ್ಸು ಮೂಡಿಸಿಕೊಂಡು ಯಾವ ಕೆಲಸವನ್ನು ಆರಂಭಿಸಿದರೂ ಅರ್ಧಂಬರ್ಧ ಮಾಡಿ ನಿಲ್ಲಿಸಿ ಬಿಡ್ತಿನಿ ಅನ್ನೋದು ಬಹುತೇಕ ಜನರ ಚಿಂತೆ. ಸಾಮಾನ್ಯವಾಗಿ ಬಹಳಷ್ಟು ಜನರನ್ನು ಮೇಲಿಂದ ಮೇಲೆ ಈ ತೊಂದರೆ ಕಾಡುತ್ತದೆ. ಮೇಲ್ನೋಟಕ್ಕೆ ಈ ಸಮಸ್ಯೆ ದೊಡ್ಡದೇನಲ್ಲ ಆದರೆ ಇದರ ಬೇರುಗಳನ್ನು ಬಲಗೊಳ್ಳಲು ಬಿಟ್ಟರೆ ಸಮಸ್ಯೆ ತಪ್ಪಿದ್ದಲ್ಲ. ಏನೆಲ್ಲ ಇದ್ದರೂ ಏನೂ ಸಾಧಿಸಲು ಸಾಧ್ಯವಾಗುವುದಿಲ್ಲ. ಅಂಥ ಪರಿಸ್ಥಿತಿ ನಿರ್ಮಾಣ ಮಾಡಿಬಿಡುತ್ತದೆ. 'ಒಂದು ದುರ್ಬಲ ಮನಸ್ಸು ಒಂದು ಸೂಕ್ಷ್ಮದರ್ಶಕದಂತೆ. ಅದು ಸಣ್ಣ ವಿಷಯಗಳನ್ನು ದೊಡ್ಡದಾಗಿಸುತ್ತದೆ. ಆದರೆ ದೊಡ್ಡದನ್ನು ಪಡೆಯಲಾರದು.' ಸ್ಫೂರ್ತಿ ಇಲ್ಲದ ಸ್ಥಿತಿಯಲ್ಲಿ ನಿರಂತರ ಎಲ್ಲದರಲ್ಲೂ ಅವಮಾನದ ಪೆಟ್ಟಿನ ಅನುಭವ ಎದೆಗೆ ಬಿಸಿ ನೀರಾಗಿಸಿ ಹುಯ್ಯುತದೆ. ಸದಾ ನಮ್ಮನ್ನು ನಾವು ಸ್ಫೂರ್ತಿಯುತವಾಗಿ ಇಟ್ಟುಕೊಳ್ಳುವುದು ಅತಿ ಮುಖ್ಯ. ಮನಸ್ಸಿದ್ದಲ್ಲಿ ಮಾರ್ಗ ತಾನಾಗಿ ಕಾಣುತ್ತದೆ. ಆದರೂ ಈ ನಿಟ್ಟಿನಲ್ಲಿ ನಮ್ಮ ದೃಷ್ಟಿಕೋನ ಬದಲಾಗದಿದ್ದರೆ 'ಆಯುಧವು ತನ್ನ ಯಜಮಾನನಿಗೂ ಶತ್ರುವೇ ಆಗಿದೆ' ಎಂಬಂತಾಗುತ್ತದೆ. ಕಲ್ಲಾಗಿರುವ ಮನಸ್ಸೆಂಬ ಆಯುಧವನ್ನು ಹೂವಿನಂತೆ ಮೆದುವಾಗಿಸಬೇಕು. ಹೊರಗಿನ ವಸ್ತುಗಳನ್ನು ಉಪಯೋಗಿಸಿ ಒಳಮನಸ್ಸನ್ನು ಹದಗೊಳಿಸಿ ಸ್ವಯಂ ಸ್ಫೂರ್ತಿಗೊಳಿಸಿಕೊಳ್ಳುವುದು ಹೇಗೆ ಎಂಬುದನ್ನು ನೋಡೋಣ ಬನ್ನಿ.

**ಶಕ್ತಿ ತುಂಬುವ ವಸ್ತುಗಳನ್ನು ಬಳಸಿ**

ನಿಮಗೆ ಹಿತ ನೀಡುವ, ಇಷ್ಟವಾಗುವ, ನೀವು ಪ್ರೀತಿಸುವ, ವಸ್ತುಗಳು ನಿಮಗೆ ಶಕ್ತಿಯನ್ನು ತುಂಬುತ್ತವೆ. ಹೀಗಾಗಿ ಇವುಗಳಿಗೆ ನಿಮ್ಮ ಸುತ್ತಲೂ ಜಾಗ ನೀಡಿ. ಅವು ತಾಜಾ ಹೂಗಳು,ಸುಂದರ ಪೇಂಟಿಂಗ್ಸ್ ಇಲ್ಲವೇ ನುಡಿಮುತ್ತುಗಳಾಗಿರಬಹುದು. ಇವು ನಿಮ್ಮನ್ನು ಸ್ಫೂರ್ತಿಗೊಳಿಸಲು ತುದಿಗಾಲಲ್ಲೇ ನಿಂತಿರುತ್ತವೆ. ನೀರಸಗೊಂಡ ಮನಸ್ಸು ತಕ್ಷಣಕ್ಕೆ ಉತ್ಸಾಹದಿಂದ ಎದ್ದು ನಿಲ್ಲುತ್ತದೆ.



ಸ್ವಯಂ ಸ್ಫೂರ್ತಿ ಇರದಿದ್ದರೆ ಸಂಕಟ, ನೋವು, ಅವಮಾನ ಹಾಗೂ ಬೇಸರಗಳು ಬೆನ್ನು ಹತ್ತಿ ಜೀವ ತಿನ್ನುತ್ತವೆ. ಜೀವನವನ್ನು ನಿಸ್ಸಾರಗೊಳಿಸುತ್ತವೆ. ಇತರರ ಮುಂದೆ ತಲೆ ತಗ್ಗಿಸುವಂತೆ ಮಾಡುತ್ತವೆ. ಕೆಲವೊಮ್ಮೆ ಶಿಕ್ಷೆಯನ್ನು ಅನುಭವಿಸುವಂತೆ ಮಾಡುತ್ತವೆ. ಒಂದು ನವಿಲು ತನ್ನ ಗರಿಗಳನ್ನು ತೆರೆದಿಟ್ಟಾಗ ಮತ್ತು ನವಿಲಿನಂತೆ ನಡೆದಾಗ ಮಾತ್ರ ಸುಂದರವಾಗಿ ಆಕರ್ಷಕವಾಗಿ ಕಾಣಬಲ್ಲದು. ಅಂತೆಯೇ ನಿಮ್ಮ ಪ್ರಪಂಚದಲ್ಲಿ ನೀವು ಬಹಳಷ್ಟು ಬಯಸುವುದನ್ನೆಲ್ಲ ಸುತ್ತುವರಿಸಿಕೊಂಡರೆ ಮನಾನಂದ ನೀಡುವದರ ಜೊತೆಗೆ ಮನಸ್ಸನ್ನು ಮಹತ್ತರ ಕಾರ್ಯಕ್ಕೆ ಸಿದ್ಧಗೊಳಿಸುತ್ತದೆ. ವಿಪರ್ಯಾಸದ ಸಂಗತಿಯೆಂದರೆ ಇದರತ್ತ ಅತೀ ಕಡಿಮೆ ಗಮನ ನೀಡುತ್ತಿದ್ದೇವೆ. ಇವುಗಳತ್ತ ಚಿತ್ತ ಹರಿಸಿದರೆ ಕಾಲದ ಗತಿಯಲ್ಲಿ ನಿಜಕ್ಕೂ ಶ್ರೇಷ್ಠ ಮಟ್ಟದಲ್ಲಿ ಸ್ಫೂರ್ತಿ ಮನೆ ಮಾಡುತ್ತದೆ. ಯಾವಾಗಲೂ ಸುಂದರ ವಸುಗಳು ನಿಮ ಕಣ ಮುಂದಿರಲಿ.



**ಹೆಚ್ಚಿನ ಸಮಯ ಓದಿ**

ಓದು ಬಹಳಷ್ಟನ್ನು ಕಲಿಸುತ್ತದೆ. ಹೊಸ ಹೊಸ ಆಲೋಚನೆಗಳು ಮನಸ್ಸನ್ನು ಪ್ರವೇಶಿಸುತ್ತವೆ. ಕಥೆ, ಕಾದಂಬರಿ, ಸದಭಿರುಚಿ ಪುಸ್ತಕಗಳ ಓದಿನಲ್ಲಿ ನಿರತರಾದರೆ ಸ್ಫೂರ್ತಿಯ ಮಟ್ಟ ಏರುತ್ತದೆ. ಸೃಜನಶೀಲತೆಯನ್ನೂ ಹೆಚ್ಚಿಸುತ್ತದೆ. ಓದಿನಲ್ಲಿಯ ಯಾವುದೇ ಒಂದು ವಿಚಾರ ನಿಮ್ಮಲ್ಲಿ ಸ್ಫೂರ್ತಿಯ ಕಿಡಿಯನ್ನು ಹೊತ್ತಿಸಬಹುದು.ಓದಿನ ಮೌಲ್ಯವನ್ನು ಅರಿತು ಅನುಸ–ರಿಸಿದರೆ ಸ್ಫೂರ್ತಿಗೆ ಮಹಾನ್ ಪಾಠ ದೊರೆಯುವುದು. ಈಗಿನ ಗ್ಯಾಜೆಟ್ ದುನಿಯಾದಲ್ಲಿ ಪುಸ್ತಕ ಓದುವದಕ್ಕಿಂತ ಸಾಮಾಜಿಕ ಜಾಲತಾಣಗಳಲ್ಲಿ ಸಮಯ ವ್ಯರ್ಥಗೊಳಿಸುವುದೇ ಹೆಚ್ಚಾಗುತ್ತಿದೆ. ಇದು ಒಂಟಿತನಕ್ಕೆ ಜಾರಿಸುತ್ತಿದೆ. 'ಎಲ್ಲ ಸಮಸ್ಯೆಗಳನ್ನು ತಪ್ಪಿಸಿ ಬಿಡುವ ಬದಲು ಎದುರಿಸಿದರೆ ಅವು ಚಿಕ್ಕದಾಗುತ್ತವೆ.' ಸ್ಫೂರ್ತಿಯಿದ್ದಲ್ಲಿ ನಮ್ಮೆಲ್ಲ ಕನಸುಗಳನ್ನು ಬೆನ್ನಟ್ಟಿ ಗೆಲ್ಲಬಹುದು. ಎಂಬುದು ಓದಿನಿಂದ ಬಹು ಬೇಗ ಅರ್ಥ–ವಾಗುತ್ತದೆ.ಒಬ್ಬ ಒಳ್ಳೆಯ ಓದುಗನು ಅವಕಾಶಗಳನ್ನು ಒಳ್ಳೆಯ ಭಾಗ್ಯವನ್ನಾಗಿ ಬದಲಾಯಿಸುತ್ತಾನೆ. ಯಾವಾಗಲಾದ್ರೂ ಓದಿದ್ರಾಯ್ತು ಎಂದು ಉದಾಸೀನ ಮಾಡಿದರೆ ಜೀವನ ಸ್ಫೂರ್ತಿಯನ್ನು ಸವಿಯಲಾಗುವುದಿಲ್ಲ.

**ಸಂಗೀತ ಆಲಿಸಿ**

'ನಾನು ಮೂರು ದಿನ ಸಂಗೀತ ಅಭ್ಯಾಸ ಮಾಡದಿದ್ದರೆ ನನ್ನ ಗಾಯನದಲ್ಲೇನೋ ಕೊರತೆಯಿದೆ ಎಂದು ನನ್ನ ಮನೆಯಾಕೆಗೆ ತಿಳಿಯುತ್ತದೆ. ಎರಡು ದಿನ ಅಭ್ಯಾಸ ಬಿಟ್ಟರೆ ತಟ್ಟನೆ ನನ್ನ ಅಭಿಮಾನಿಗಳು ಗುರುತಿಸಬಲ್ಲರು. ಇಲ್ಲ ಒಂದೇ ಒಂದು ದಿನ ಅಭ್ಯಾಸವನ್ನು ಬಿಟ್ಟರೂ ನನ್ನ ಆಲಾಪದಲ್ಲೇನೋ ಕೊರತೆಯಿದೆ ಎಂದು ಖುದ್ದು ನನಗೆ ಗೊತ್ತಾಗುತ್ತದೆ.'ಇದು ಸಂಗೀತದ ದೈತ್ಯ ಪ್ರತಿಭೆ ಎಂದೇ ಖ್ಯಾತರಾದ ಜಗಜೀತ್ ಸಿಂಗ್ ತನ್ನ ಅಭ್ಯಾಸದ ಕುರಿತು ಸ್ವಾರಸ್ಯಕರವಾಗಿ ಹೇಳಿದ ರೀತಿ. ಸಂಗೀತವು ಮನಸ್ಸನ್ನು, ಸುಂದರ ಭಾವನೆಗಳನ್ನು ಅರಳಿಸುತ್ತದೆ. ನಿಮಗೆ ಬೇಕಾದುದನ್ನು ಪಡೆಯಲು ಕಷ್ಟ ಪಟ್ಟು ಕೆಲಸ ಮಾಡಿದ ನಂತರ, ಅದನ್ನು ಸಂತೋಷದಿಂದ ಅನುಭವಿಸಲು ಸಮಯ ಪಡೆದುಕೊಳ್ಳಿ. ಗಜಿಬಿ–ಜಿಯಾಗಿರುವ ಮನಸ್ಸಿಗೆ ವಿಶ್ರಾಂತಿ ನೀಡಿ ಮುದಗೊಳಿಸುತ್ತದೆ. ಸೂರ್ತಿಯತ್ತ ವಾಲಿಸುತ್ತದೆ.

**ದಿನಚರಿ ಬದಲಿಸಿ**

'ಮಾಡಿದ್ದನ್ನೇ ಮಾಡುತ್ತ ವಿಭಿನ್ನವಾದ ಫಲಿತಾಂಶವನ್ನು ನಿರೀಕ್ಷಿಸುವುದು ಮೂರ್ಖತನ.' ಎಂದು ಹೇಳಿದ್ದಾನೆ ಜಗತ್ತಿನ ಮೇದಾವಿ ವಿಜ್ಞಾನಿ ಅಲ್ಬರ್ಟ್ ಐನಸ್ಟೀನ್. ದಿನ ನಿತ್ಯ ಅದೇ ಕೆಲಸ, ಅದೇ ಜನರು, ಅದೇ ಗೊಣಗಾಟ, ಜಂಜಾಟ. ಹೀಗಿದ್ದಾಗ್ಯೂ ದಿನಚ–ರಿಯಲ್ಲಿ ಬದಲಾವಣೆಗೆ ಮನಸ್ಸು ಮಾಡುವುದು ಕಮ್ಮಿ. ಇಲ್ಲವೇ ಇಲ್ಲವೆನ್ನುವಷ್ಟು ಬದಲಾವಣೆಯನ್ನು ದೈನಂದಿನ ಕೆಲಸಗಳಲ್ಲಿ ತರುತ್ತೇವೆ. ನಿರಾಸಕ್ತಿಯಿಂದ ಅದನ್ನೇ ನಿಯಮಿತವಾಗಿ ಪಾಲಿಸುತ್ತೇವೆ. ಒಂದೇ ದಾರಿಯಲ್ಲೇ ಓಡಾಡುತ್ತೇವೆ. ಒಂದೇ ಹೊಟೆಲ್ಲಿನಲ್ಲಿ ಕಾಫೀ ಹೀರುತ್ತೇವೆ. ತಿನ್ನುವ ತಿಂಡಿ ತಿನಿಸು ಬದಲಿಸಲೂ ಹಿಂಜ–ರಿಯುತ್ತೇವೆ. ಒಟ್ಟಿನಲ್ಲಿ ಏಕತಾನತೆಗೆ ಗಂಟು ಬಿದ್ದಿರುತ್ತೇವೆ. ಬದಲಾವಣೆ ಮನಸ್ಸಿಗೆ ಆಗಿ ಬರುವ ಮಾತಲ್ಲ. ದಿನಚರಿ ಬದಲಿಸಲು ಮನಸ್ಸು ಅಷ್ಟು ಸುಲಭವಾಗಿ ಒಪ್ಪುವುದೂ ಇಲ್ಲ. ಹೊಸ ಸವಾಲುಗಳು ತಲೆ ತಿನ್ನುವ ಸಮಸ್ಯೆಗಳೆನಿಸದೇ, ಹೊಸ ಆಯಾಮದಲ್ಲಿ ಹೊಸ ಅನುಭವಗಳಾಗಬೇಕೆಂದರೆ



ಸೂರ್ತಿಯುತ ದಿನಚರಿಗೆ ಅಣಿಯಾಗಬೇಕು. 'ಸಮುದ್ರ ಶಾಂತವಾಗಿದ್ದಾಗ ಯಾರು ಬೇಕಿದ್ದರೂ ಚುಕ್ಕಾಣಿ ಹಿಡಿಯಬಹುದು. 'ಮನಸ್ಸು ಶಾಂತವಾಗಿರುವಾಗ ಅದನ್ನು ಪುಟ್ಟ ಮಗುವಿನಂತೆ ಮುದ್ದಿಸಿ ಹೊಸ ಬದಲಾವಣೆಗೆ ಒಪ್ಪಿಸಬೇಕು.



'ಅತ್ಯುತ್ತಮ ದಿನಚರಿ ನಮ್ಮದಾಗಿದ್ದರೆ ಸ್ವಯಂ ಸ್ಫೂರ್ತಿಯ ಕಡಲು ನಮ್ಮ ಅಂಗೈಯಲ್ಲೇ ಇದೆ.

**ದೇಶ ಸುತ್ತಿ**

ಶೈಕ್ಷಣಿಕ ಪ್ರವಾಸ ಇಲ್ಲವೇ ಸಣ್ಣ ಪುಟ್ಟ ಪ್ರಯಾಣಗಳು ನವನವೀನ ಅನುಭವಗಳನ್ನು ನೀಡುತ್ತವೆ. ವಿಚಾರದ ದಿಕ್ಕನ್ನು ಉತ್ತಮತೆಯತ್ತ ಹೊರಳಿಸುತ್ತವೆ. ದೂರದ ದೇಶಕ್ಕೆ ಪಯಣಿಸಬೇಕೆಂದೇನೂ ಇಲ್ಲ. ವಾಸವಿರುವ ನಗರವನ್ನೇ ಸುತ್ತಬಹುದು. ನೀವಿನ್ನೂ ನೋಡಿರದ ಪಾರ್ಕ್‌ನಲ್ಲಿ ಸುತ್ತಾಡಿ. ಹೊಸ ಮಠ ಮಂದಿರಗಳಿಗೆ ಕುಟುಂಬ, ಗೆಳೆಯರೊಂದಿಗೆ ಹೋಗಿ ಬನ್ನಿ. ವಿವಿಧ ಹಾದಿ ಬೀದಿಗಳಲ್ಲಿ ತಿರುಗುವುದು ವಿಶಿಷ್ಟ ಸ್ಫೂರ್ತಿಗೆ ದಾರಿಯಾಗುತ್ತದೆ. ಪಕ್ಕದ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದರೂ ಲವಲವಿಕೆ ತುಂಬಿಕೊಳ್ಳುತ್ತದೆ. ಅಜ್ಞಾನದ ಅಂದಕಾರವನ್ನು ಕಡಿಮೆಗೊಳಿಸಿ ಜ್ಞಾನ ಕ್ಷಿತಿಜವನ್ನು ಅಗಲಿಸುತ್ತವೆ.

**ಎತ್ತರದ ಗುರಿಯಿರಲಿ**

ತಮಗೆಲ್ಲ ಗೊತ್ತಿರುವಂತೆ ಒಲಂಪಿಕ್ಸ್ ನಾಲ್ಕು ವರ್ಷಕ್ಕೊಮ್ಮೆ ಬರುವ ಕ್ರೀಡಾಕೂಟ. ಆದರೆ ಲಕ್ಷೋಪಲಕ್ಷ ಕ್ರೀಡಾ ಪಟುಗಳು ಒಲಂಪಿಕ್ಸ್‌ನಲ್ಲಿ ಬಂಗಾರದ ಪದಕ ಕೊರಳಿಗೇರಿಸಿ ಗೆಲುವಿನ ರುಚಿ ನೋಡಲು ದಿನ ನಿತ್ಯ ಬೆವರು ಹರಿಸುತ್ತಿರುತ್ತಾರೆ. ಉಸೇನ್ ಬೋಲ್ಟ್ ನೂರು ಮೀಟರ್‌ನ್ನು ಕ್ರಮಿಸಲು ಬೇಕಾಗಿರುವ ಅವಧಿ ಬರೀ ಒಂಭತ್ತುವರಿ ಸೆಂಕೆಡುಗಳಷ್ಟೇ! ಆದರೆ ನಿತ್ಯದ ಅಭ್ಯಾಸ? ಉಳಿದ ಓಟಗಾರನಿಗಿಂತ ನೂರು ಪಟ್ಟು ಹೆಚ್ಚು ಮಾಡಲೇಬೇಕು. ಅಷ್ಟರ ಮಟ್ಟದ ಸ್ವಯಂ ಸ್ಫೂರ್ತಿ ಇರದಿದ್ದರೆ ಉಸೇನ್ ಬೋಲ್ಟ್ ಜಾಗತಿಕ ಮಟ್ಟದಲ್ಲಿ ನಂಬರ್ ಒನ್ ಓಟಗಾರನಾಗಿ ಮಿಂಚಲು ಸಾಧ್ಯವಾಗುತ್ತಿರಲಿಲ್ಲ. ಸ್ವಯಂ ಸ್ಫೂರ್ತಿಯಿಲ್ಲದೇ ಗೆಲುವು



ಕಂಡಿರುವ ವ್ಯಕ್ತಿ ಇರುವುದು ಅಸಾಧ್ಯ. 'ಸಣ್ಣ ಗುರಿಗಳನ್ನು ಹೊಂದುವುದು ಅಪರಾಧ/'ಎಂದಿದ್ದಾರೆ ಅಬ್ದುಲ್ ಕಲಾಂ. ಎತ್ತರದ ಆಗಸಕ್ಕೆ ಹಾರುವುದು ನಮ್ಮ ಗುರಿಯಾಗಿರಬೇಕು. ನಾವು ಅಲ್ಲಿಗೆ ತಲುಪದಿರಬಹುದು ಆದ–ರೆ ನಾವಿರುವ ಮಟ್ಟದಲ್ಲೇ ಇರುವ ವಸ್ತುವಿಗೆ ಗುರಿಯಿಟ್ಟರೆ ಹಾರುವ ಮಟ್ಟಕ್ಕಿಂತ ಕಡಿಮೆ ಮಟ್ಟಕ್ಕೆ ನಮ್ಮ ಗುರಿಯ ಬಾಣ ಹಾರುತ್ತದೆ. ಎಲ್ಲಿಯವರೆಗೂ ನಾವು ಸ್ವಯಂ ಸ್ಫೂರ್ತಿಗೆ ಹಾತೊರೆಯುವುದಿಲ್ಲವೋ ಅಲ್ಲಿಯವರೆಗೆ ಗೆಲುವು ನಮಗೆ ದಕ್ಕುವುದಿಲ್ಲ. ನಾವು ಯಾವುದನ್ನಾದರೂ ಸಾಕಷ್ಟು ಪ್ರೀತಿಸಿದರೆ, ಅದು ತನ್ನ ರಹಸ್ಯಗಳನ್ನೆಲ್ಲ ಬಿಟ್ಟು ಕೊಡುತ್ತದೆ. ಆದ್ದರಿಂದ ಅಂಗೈಯಲ್ಲಿರುವ ಸ್ವಯಂ ಸ್ಫೂರ್ತಿಯನ್ನು ಪ್ರೀತ್ಸೋಣ ದೊಡ್ಡ ಗೆಲುವಿನ ನಗೆ ಬೀರೋಣ.

ಲಿಂ.ಚಂದ್ರಕಾಂತ ಕರದಳ್ಳಿ ಪುಣ್ಯಸ್ಮರಣೆ & ಶ್ರೀ ಚಂದ್ರಕಾಂತ ಸದ್ಭಾವನಾ ಪುರಸ್ಕಾರದಲ್ಲಿ ವಿಮರ್ಶಕ ಸಿ.ಎಸ್.ಭೀಮರಾಯ ಅಭಿಮತ

# ಮಕ್ಕಳ ಸಾಹಿತ್ಯ ರಚನೆಗೆ ಮಗು ಮನಸ್ಸು ಅಗತ್ಯ



**ಉದಯರಶ್ಮಿ ನ್ಯೂಸ್**

ಶಹಾಪೂರ: ಮಕ್ಕಳ ಸಾಹಿತ್ಯ ಮತ್ತು ಸಾಹಿತಿಗಳೆಂದರೆ ಮೂಗು ಮುರಿಯುವುದರೊಂದಿಗೆ ಅಸಡ್ಡೆ ಮಾಡುವುದು ಸರಿಯಲ್ಲ. ಮಕ್ಕಳ ಸಾಹಿತ್ಯ ರಚನೆಗೆ ಮಗು ಮನಸ್ಸಿರಬೇಕು. ಮಕ್ಕಳಿಗಾಗಿ ಕಥೆ, ಕವಿತೆ, ನಾಟಕ ಮತ್ತು ಕಾದಂಬರಿ ರಚಿಸುವುದು ಕಷ್ಟದ ಕೆಲಸ. ಮಕ್ಕಳ ಸಾಹಿತಿಗಳು ಮಕ್ಕಳ ಬೌದ್ಧಿಕ ಮಟ್ಟವನ್ನು ಗಮನದಲ್ಲಿಟ್ಟುಕೊಂಡು, ಅವರ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗುವ, ನೈತಿಕ ಮೌಲ್ಯ ಮತ್ತು ರಾಷ್ಟ್ರಪ್ರೇಮದ ಗುಣಗಳನ್ನು ಬೆಳೆಸುವಂತಹ ಸಾಹಿತ್ಯ ರಚನೆಯಾಗಬೇಕೆಂದು ವಿಮರ್ಶಕ ಸಿ.ಎಸ್.ಭೀಮರಾಯ ಅಭಿಪ್ರಾಯಪಟ್ಟರು.

ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಶ್ರೀ ಚಂದ್ರಕಾಂತ ಕರದಳ್ಳಿ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಲಿಂ. ಚಂದ್ರಕಾಂತ ಕರದಳ್ಳಿಯವರ ನಾಲ್ಕನೇ ವರ್ಷದ ಪುಣ್ಯಸ್ಮರಣೆ ಹಾಗೂ ಶ್ರೀ ಚಂದ್ರಕಾಂತ ಸದ್ಭಾವನಾ ಪುರಸ್ಕಾರ–2023ರ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸಕರಾಗಿ ಮಾತನಾಡಿದರು.



ಮಕ್ಕಳನ್ನು ಉದ್ದೇಶಿಸಿ ರಚನೆ ಮಾಡುವ ಸಾಹಿತ್ಯವನ್ನು ಮಕ್ಕಳೇ ಓದುವುದಿಲ್ಲ. ಮಕ್ಕಳ ಸಾಹಿತ್ಯ ಬರೆಯುವವರ ನಡುವೆಯಷ್ಟೇ ಅದು ವಿನಿಮಯಗೊಳ್ಳುತ್ತದೆ. ಸಾಹಿತ್ಯದಲ್ಲಿ ಮಕ್ಕಳಿಗೆ ಅಭಿರುಚಿ ಹುಟ್ಟಿಸಬೇಕಿದೆ. ಮಕ್ಕಳಿಗೆ ಆಸಕ್ತಿ ಹುಟ್ಟಿಸುವ ರೀತಿ ಕಥೆ, ಕವಿತೆ ಹೇಳಿದರೆ, ಪುಸ್ತಕದ ಕುರಿತು ಹೇಳಿದರೆ ಅವರಲ್ಲಿ ಅಭಿರುಚಿ ಬೆಳೆಯುತ್ತದೆ. ಆ ನಿಟ್ಟಿನಲ್ಲಿ ಶಿಕ್ಷಕರು ಮತ್ತು ಪಾಲಕರು ಪ್ರಯತ್ನಿಸಬೇಕೆಂದು ಅವರು ಸೂಚಿಸಿದರು.

ಸಾನಿಧ್ಯವನ್ನು ವಹಿಸಿಕೊಂಡಿದ್ದ ಗುರುಪಾದ ಮಹಾಸಾಮಿಗಳು ಮಾತನಾಡುತ್ತಾ, ಇಂದಿನ ಮಕ್ಕಳಿಗೆ ಮಾದರಿ ಎಂಬುದೇ ಇಲ್ಲ. ಸಮಾಜಕ್ಕೆ ಸುಸಂಸ್ಕೃತ ಮಕ್ಕಳನ್ನು ಕಾಣಿಕೆಯಾಗಿ ನೀಡಲು ಪುಸ್ತಕ ಸಂಸ್ಕೃತಿಯಿಂದ ಮಾತ್ರ ಸಾಧ್ಯ. ಅದಕ್ಕಾಗಿ ಶಿಕ್ಷಕರು ಮತ್ತು ಪಾಲಕರು ಮಕ್ಕಳಿಗೆ ಪುಸ್ತಕ ಓದಲು ಪ್ರೇರೇಪಿಸಬೇಕೆಂದು ಅವರು ಹೇಳಿದರು.

ಇದಕ್ಕೂ ಮುನ್ನ ನಾಡಿನ ಹೆಸರಾಂತ ಮಕ್ಕಳ ಸಾಹಿತಿ ಹ. ಮ. ಪೂಜಾರ ಅವರಿಗೆ ಐದು ಸಾವಿರ ನಗದು, ಸ್ಮರಣಿಕೆ, ಪ್ರಶಸ್ತಿ ಪತ್ರ ಒಳಗೊಂಡ ರಾಜ್ಯಮಟ್ಟದ 2023ನೇ ಸಾಲಿನ ಶ್ರೀ ಚಂದ್ರಕಾಂತ ಕರದಳ್ಳಿ ಸದ್ಭಾವನಾ ಪುರಸ್ಕಾರ ನೀಡಲಾಯಿತು. ಹಾಗೆಯೇ ಯಾದಗಿರಿ ಜಿಲ್ಲೆಯ ಸಹಕಾರ ಒಕ್ಕೂಟ ಯುನಿಯನ್ (ನಿ) ಅಧ್ಯಕ್ಷ ವಿಶ್ವನಾಥರೆಡ್ಡಿ ದರ್ಶನಾಪುರ ಅವರ ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಗಮನಿಸಿ ಮತ್ತು ಗುರುಪಾದ ಮಹಾಸ್ವಾಮಿಗಳ ಶೈಕ್ಷಣಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿನ ಕೊಡುಗೆಯನ್ನು ಗುರುತಿಸಿ ಶ್ರೀ ಚಂದ್ರಕಾಂತ ಕರದಳ್ಳಿ ಪ್ರತಿಷ್ಠಾನವು ಈ ಕಾರ್ಯಕ್ರಮದಲ್ಲಿ ಗೌರವಿಸಿತು.

ನಿವೃತ್ತ ಮುಖ್ಯೋಪಾಧ್ಯಾಯ ಗುರುಬಸಯ್ಯ ಗದ್ದುಗೆ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ವಿಶ್ವನಾಥರೆಡ್ಡಿ ದರ್ಶನಾಪುರ, ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ರವೀಂದ್ರನಾಥ ಹೊಸಮನಿ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಶಿಕ್ಷಕರಾದ ಗೌರೀಶ ಅವಟಿ ನಿರೂಪಿಸಿದರು. ಶ್ರೀಶೈಲ ಮಠ ವಂದಿಸಿದರು.

# ಹೊನ್ನಳ್ಳಿ ಗ್ರಾಪಂ: ವಿಶೇಷ ಗ್ರಾಮ ಸಭೆ

**ಉದಯರಶ್ಮಿ ನ್ಯೂಸ್**



ಬ್ರಹ್ಮದೇವನಮಡು: ಸಿಂದಗಿ ತಾಲೂಕಿನ ಹೊನ್ನಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಬಸವ ವಸತಿ ಯೋಜನೆಯಡಿ ಆಶ್ರಯ ಮನೆಗಳ ಫಲಾನುಭವಿಗಳ ಆಯ್ಕೆ ವಿಶೇಷ ಗ್ರಾಮ ಸಭೆ ಗ್ರಾಪಂ ಅಧ್ಯಕ್ಷ ಸಂಗನಗೌಡ ಬಿರಾದಾರ ಅವರ ಅಧ್ಯಕ್ಷತೆಯಲ್ಲಿ ಶ್ರೀ ಕಲ್ಯಾಣದ್ದೇಶ್ವರ ಮಠದ ಆವರಣದಲ್ಲಿ ಬುಧವಾರ ನಡೆಯಿತು.

ಗ್ರಾಪಂ ಪಿಡಿಒ ಎಸ್.ಸಿ.ನಾಯ್ಕೋಡಿ ಮಾತನಾಡಿ, ಗ್ರಾಪಂ ವ್ಯಾಪ್ತಿಯ ಹೊನ್ನಳ್ಳಿ, ಬ್ರಹ್ಮದೇವನಮಡು, ಖಾನಾಪೂರ, ಕರವಿನಾಳ ಗ್ರಾಮಗಳಲ್ಲಿ ಬಸವ ವಸತಿ ಯೋಜನೆಯಡಿ 76 ಮನೆಗಳ ಹಂಚಿಕೆ ಪ್ರಕ್ರಿಯೆ ಪಾರದಶ9ಕವಾಗಿ ಅಹ9 ಫಲಾನುಭವಿಗಳ ಆಯ್ಕೆ ಮಾಡಲಾಗಿದೆ ಎಂದರು.

ಈ ಸಂದಭ9ದಲ್ಲಿ ತಾಲೂಕು ಅರಣ್ಯಾಧಿಕಾರಿ, ಗ್ರಾಪಂ ನೋಡಲ್ ಅಧಿಕಾರಿ ಎಂ.ವೈ. ಮಲ್ಕಣ್ಣನವರ, ಗ್ರಾಪಂ ಉಪಾಧ್ಯಕ್ಷೆ ಮುನ್ನಿ ಸಾಹೇಪಟೇಲ ಮುರಡಿ, ಕಾಯ9ದಶಿ9 ಚಾಂದಾಬಾಷಾ ಕೊರಬು, ತಿಪ್ಪಯ್ಯ ನೆಲ್ಲಗಿಮಠ, ಸೋಮನಗೌಡ ಚಿರಲದಿನ್ನಿ, ದೇವಿಂದ್ರ ತೊನಶ್ಯಾಳ, ಕಲ್ಲಪ್ಪಗೌಡ ಪಾಟೀಲ, ಮರೇಪ್ಪ ಚಲುವಾದಿ, ಕಂಪ್ಯೂಟರ್ ಆಪರೇಟರ್ ಅಂಬ್ರಿಶ ಪಾಟೀಲ, ಹಣಮಂತ್ರಾಯಗೌಡ ಬಿರಾದಾರ, ಸಂಗನಗೌಡ ಪಾಟೀಲ, ಬಸನಗೌಡ ಉಳ್ಳೆಸೂರ, ಚಂದ್ರು ಕೆಂಭಾವಿ, ಹಣಮಂತ ಯಂಟಮಾನ, ಬಂದೇನವಾಜ ಸೀತನೂರ, ಡಿ.ಕೆ.ಸೀತನೂರ, ಮಶ್ಯಾಕ ನಾಯ್ಕೋಡಿ, ನಜೀರಸಾಬ ನಾಯ್ಕೋಡಿ, ಆನಂದ ದೊಡ್ಡಮನಿ ಸೇರಿದಂತೆ ಗ್ರಾಪಂ ವ್ಯಾಪ್ತಿಯ ಮಹಿಳೆಯರು, ಗ್ರಾಮಸ್ಥರು ಇದ್ದರು.

# ನಗರವನ್ನು ಸ್ವಚ್ಛ–ಸುಂದರವನ್ನಾಗಿಸಿ :ಲೋಕಾ ಎಸ್ಪಿ ಹಣಮಂತರಾಯ

**ಉದಯರಶ್ಮಿ ನ್ಯೂಸ್**



ವಿಜಯಪುರ: ಜಿಲ್ಲೆಯು ಐತಿಹಾಸಿಕ ಸ್ಮಾರಕಗಳಿಗೆ ಹೆಸರುವಾಸಿಯಾಗಿದ್ದು, ಇದೊಂದು ಪ್ರವಾಸಿ ತಾಣವಾಗಿದೆ. ದೇಶ–ವಿದೇಶದ ಪ್ರವಾಸಿಗರು ಆಗಮಿಸುತ್ತಿದ್ದು, ನಗರದ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಲೋಕಾಯುಕ್ತ ಅಧಿಕ್ಷಕ ಹನಮಂತರಾಯ ಅವರು ಹೇಳಿದರು.

ಬುಧವಾರ ನಗರದ ಸೆಟ್‌ಲೈಟ್ ಬಸ್ ನಿಲ್ದಾಣ, ಶಿವಾಜಿ ವೃತ್ತ, ಕೇಂದ್ರ ಬಸ್ ನಿಲ್ದಾಣ, ಕೋರ್ಟ್, ಗಗನ ಮಹಲ್ ಹಾಗೂ ಎ.ಪಿ.ಎಮ್.ಸಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿ ವೀಕ್ಷಿಸಿದರು.

ಸೆಟ್‌ಲೈಟ್ ಬಸ್ ನಿಲ್ದಾಣ ಹಾಗೂ ಕೇಂದ್ರ ಬಸ್ ನಿಲ್ದಾಣಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಗೋಡೆ ಆವರಣ ಸುತ್ತಲೂ ವಿವಿಧ ಗಿಡ ಮರಗಳ ಬೆಳೆಸಬೇಕು. ಹಸಿರು ಹುಲ್ಲು ಬೆಳೆಸುವ ಮೂಲಕ ಬಸ್ ನಿಲ್ದಾಣವನ್ನು ಸುಂದರವಾಗಿಸುವುದರೊಂದಿಗೆ ಸ್ವಚ್ಛತೆ, ಕಸ–ತ್ಯಾಜ್ಯವನ್ನು ದಿನದಲ್ಲಿ ಎರಡು ಸರತಿಗಳಲ್ಲಿ ವಿಲೇವಾರಿಗೆ ಕ್ರಮ ವಹಿಸಬೇಕು. ನಿಲ್ದಾಣದ ಆವರಣದಲ್ಲಿರುವ ಐತಿಹಾಸಿಕ ಬಾವಿಯನ್ನು ಸ್ವಚ್ಛಗೊಳಿಸಿ, ನೀರನ್ನು ಬಳಸಿಕೊಳ್ಳುವಂತೆ, ಬಸ್ ನಿಲ್ದಾಣದ ಸ್ಥಳಗಳಲ್ಲಿ ಸಿ.ಸಿ. ಟಿವಿ ಅಳವಡಿಸಬೇಕು ಎಂದು ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳಿಗೆ ಹಾಗೂ ಮಹಾನಗರ ಪಾಲಿಕೆ ಆಯುಕ್ತರಿಗೆ ಸೂಚಿಸಿದರು.

ಜಿಲ್ಲೆಯ ಬೇರೆ–ಬೇರೆ ಗ್ರಾಮಗಳಿಂದ ಶಾಲಾ–ಕಾಲೇಜುಗಳಿಗೆ ವಿದ್ಯಾರ್ಥಿಗಳು ನಗರಕ್ಕೆ ಆಗಮಿಸುತ್ತಾರೆ. ಶಾಲಾ□ಕಾಲೇಜಿನ ನಿಗದಿತ ಸಮಯಕ್ಕನುಗುಣವಾಗಿ ವಿದ್ಯಾರ್ಥಿಗಳು ತಲುಪುವಂತೆ ಹೆಚ್ಚುವರಿ ಬಸ್ ಸಂಚರಿಸುವಂತೆ ನೋಡಿಕೊಳ್ಳಬೇಕು. ಶಿವಾಜಿ ವೃತ್ತದಲ್ಲಿರುವ ಕೋಟೆ ಗೋಡೆಗೆ ಹೊಂದಿಕೊಂಡಂತೆ ಕಂದಕದ ಹತ್ತರ್ದ ಎತ್ತರದ ಗೋಡೆ ನಿರ್ಮಿಸಿ,ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಸೂಚಿಸಿದರು. ಲಾಲ್ ಬಹದ್ದೂರ ಶಾಸ್ತ್ರೀ ಮಾರುಕಟ್ಟೆಗೆ ಭೇಟಿ ನೀಡಿ, ಸ್ವಚ್ಛತೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿ ಪೌರ ಕಾರ್ಮಿಕರನ್ನು ಅಭಿನಂದಿಸಿದರು. ಸ್ವಚ್ಛತೆ ಜೊತೆಗೆ ತಮ್ಮ ಆರೋಗ್ಯ ಕುರಿತು ಹೆಚ್ಚು ಗಮನ ಹರಿಸುವಂತೆ ಅವರಿಗೆ ತಿಳಿಸಿದರು. ಗಗನ ಮಹಲ್, ಕೋರ್ಟ್ ಆವರಣ ಹಾಗೂ ಎ.ಪಿ.ಎಂ.ಸಿಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿಸಿದ ಅವರು, ಮುಂಬರುವ ದಿನಗಳಲ್ಲಿ ಸ್ವಚ್ಛ ಹಾಗೂ ಸುಂದರ ನಗರವನ್ನಾಗಿಸಲು ಅಗತ್ಯ ಕ್ರಮಕ್ಕಾಗಿ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತರಾದ ಬದ್ರುದ್ದೀನ ಸೌದಾಗರ, ವಿಜಯಪುರ ತಹಶೀಲ್ದಾರ್ ಕವಿತಾ, ಲೋಕಾಯುಕ್ತ ಡಿ.ವೈ.ಎಸ್.ಪಿ ಸುರೇಶ ರೆಡ್ಡಿ, ಈಶಾನ್ಯ ಕರ್ನಾಟಕ ಸಾರಿಗೆ ವಿಜಯಪುರ ಘಟಕದ ವಿಭಾಗೀಯ ನಿಯಂತ್ರಣಾಧಿಕಾರಿ ಜೆ.ಎಮ್.ಫಯಾಜ್, ಲೋಕಾಯುಕ್ತ ಪೊಲೀಸ್ ಇನ್ಸಪೆಕ್ಟರ್ ಆನಂದ ಟಕ್ಕನ್ನವರ ಹಾಗೂ ಆನಂದ ಡೋಣಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಕಾವ್ಯರಶ್ಮಿ

– ಛಾಯಾ ಪದ್ಮನಾಭ್
("ನಮ್ಮ ಕಥಾ ಅರಮನೆ" ಬರಹಗಾರರು)




### ಹೃದಯ

ನೀನಾಗಿರುವೆ ನನ್ನ ಮನದ ಉಸಿರು
ನನ್ನ ಹೃದಯದ ತುಂಬಾ ನಿನ್ನ ಹೆಸರು

ಕೇಳಿಸುತಿಲ್ಲ ನನ್ನ ಹೃದಯದ ಬಡಿತ
ಅರಿತುಕೋ ನೀ ನನ್ನ ಮನದ ತುಡಿತ


ನಿನ್ನದೇ ಗುಂಗಿನಲಿ ಸಾಗುತಿದೆ ಪಯಣ
ಹೃದಯದಲಿ ನಿನ್ನ ನೆನಪುಗಳ ಚುಂಬನ

ನಿನ್ನ ಪ್ರೀತಿಗಾಗಿ ಹಂಬಲಿಸುತಿದೆ ಹೃದಯ
ಕಾಯುತಿರುವೆ ನಾನು ನಿನಗಾಗಿ ಗೆಳೆಯ



# ನಮ್ಮ ಅಡುಗೆ ಅರಮನೆಯ ಸಡಗರ



– ಗುಡ್ಡಾಭಟ್ಟ ಜೋಶಿ ಹೊಳಲ
("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

'ನಮ್ಮ ಅಡುಗೆ ಅರಮನೆ' ಜಾಲತಾಣದಲಿ ಈಗ 25000 ಸದಸ್ಯರ ಪ್ರೀತಿಯ ಅಡುಗೆ ಅರಮನೆ ಎನ್ನುವ ಭಾವದ ಆನಂದ ವರ್ಣನಾತೀತ. ಈ ಪರಮಾನಂದದ ಸಂಭ್ರಮಕ್ಕೆ ಅಡುಗೆ ಅರಮನೆಯ 25000 ಸಾವಿರ ಸದಸ್ಯರಿಗೆ ಅಭಿನಂದನೆಗಳು. ಇಂದಿನ ಈ ಸಂತೋಷಕರ ಸಡಗರಕ್ಕೆ ಪ್ರಾರಂಭದಿಂದ ಇಂದಿನವರೆಗೂ ಸದಸ್ಯರ ಅಮಿತ ಅಭಿಮಾನವೇ ಕಾರಣ.

ಅಂದು ನನ್ನ ಆತ್ಮವಿಶ್ವಾಸದ ನಿರ್ಧಾರ ಇಷ್ಟೆಲ್ಲಾ ಬೆಳವಣಿಗೆಗೆ ಸಾಕ್ಷಿಯಾಗಿದ್ದು ಸದಸ್ಯರ ಅಭಿಮಾನದ ಪ್ರೀತಿಯಿಂದಲೇ. ಅಂದು ನಮ್ಮ ಅಡುಗೆ ಅರಮನೆಯ ಅಡಿಪಾಯ ಹಾಕಲು ಹಲವರು ಬೆಂಬಲ ಸೂಚಿಸಿದ್ದು... ನನ್ನೊಳಗಿನ ಸ್ವಾಭಿಮಾನ ಆತ್ಮವಿಶ್ವಾಸಕ್ಕೆ ಪ್ರತೀಕವಾಗಿ ನಮ್ಮ ಅಡುಗೆ ಅರಮನೆ ಇಂದು 25000 ಸದಸ್ಯರ ಆತ್ಮೀಯ ಅಭಿಮಾನದ ಲೋಕವಾಯಿತು.

ಅನುದಿನವೂ ಹೊಸ ಹೊಸ ರೀತಿಯ ಥೀಮ್ ಗಳು...

ವಿಭಿನ್ನ ರುಚಿಯ ಅಡುಗೆಗಳ ಘಮ ಘಮ ಘಮಿಸುವ ವಿಧಾನಗಳು. ಗ್ರಾಮೀಣ ಅಡುಗೆಗಳ ಸೊಗಡು, ಆಧುನಿಕ ಅಡುಗೆಗಳ ಸೊಬಗು, ಸಿಹಿ ತಿಂಡಿಗಳ ತಯಾರಿಸುವ ಭಿನ್ನ ರುಚಿಯ ಬಗೆ, ಖಾರ ಮಸಾಲೆ ತಿಂಡಿಗಳ ಬಗ್ಗೆ ನವ ನವೀನ ರೀತಿಯ ಮಾಹಿತಿ ಎಲ್ಲವೂ ನಮ್ಮ ಅಡುಗೆ ಅರಮನೆಯ ಇಂದಿನ ಬೆಳವಣಿಗೆಗೆ 25000 ಸದಸ್ಯರು ಮುಖ್ಯ ಕಾರಣ.

ನಮ್ಮ ಅಡುಗೆ ಅರಮನೆಯ ಹೆಮ್ಮೆಯ ಸದಸ್ಯರ ಆತ್ಮೀಯ ಅಭಿಮಾನ ಸದಾ ಹೀಗೆಯೇ ಸುದೀರ್ಘವಾಗಲಿ. ನಮ್ಮ ಅಡುಗೆ ಅರಮನೆಯ ಆವರಣದಲ್ಲಿ ಅನುದಿನವೂ ರುಚಿಕರ ಅಡುಗೆಗಳ ಪರಿಮಳ ಸಡಗರ ಸಂಭ್ರಮದಿಂದ ಕೂಡಿರಲಿ. ನಮ್ಮ ಅಡುಗೆ ಅರಮನೆಯ ಹೆಮ್ಮೆಯ 25000 ಸದಸ್ಯರಿಗೆ ಹೃತ್ಪೂರ್ವಕ ಅಭಿನಂದನೆಗಳು..

ನಿಮ್ಮ ಪ್ರೀತಿಯ

ಕೃಷಿ–ತೋಟಗಾರಿಕೆ ಉತ್ಪನ್ನಗಳ ಖರೀದಿದಾರ–ಮಾರಾಟಗಾರರ ಸಮಾವೇಶಕ್ಕೆ ಚಾಲನೆ

# ಸಮಗ್ರ ಕೃಷಿ ಬೇಸಾಯ ಪದ್ಧತಿ ಅಳವಡಿಕೆಗೆ ಡಿಸಿ ಟಿ.ಭೂಬಾಲನ್ ಕರೆ

**ಉದಯರಶ್ಮಿ ದಿನಪತ್ರಿಕೆ**



ವಿಜಯಪುರ: ನಮ್ಮ ಜಿಲ್ಲೆಯು ಪ್ರಮುಖವಾಗಿ ಕೃಷಿ ಆಧಾರಿತವಾಗಿದೆ. ರೈತರು ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡು ತಮ್ಮ ಆದಾಯ ದ್ವಿಗುಣಗೊಳಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ಟಿ.ಭೂಬಾಲನ ಅವರು ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕೃಷಿಗೆ ಸಂಬಂಧಿಸಿದ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಖರೀದಿದಾರ ಹಾಗೂ ಮಾರಾಟಗಾರರ ಸಮಾವೇಶ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರೈತರು ರಾಸಾಯನಿಕ ಗೊಬ್ಬರ ಬಳಸದೇ, ಸಾವಯವ ರಸಗೊಬ್ಬರವನ್ನು ಉಪಯೋಗಿಸಿ ಹೆಚ್ಚಿನ ಇಳುವರಿ ಪಡೆಯಬೇಕು. ರೈತರು ಕೃಷಿಯಲ್ಲಿ ವೈಜ್ಞಾನಿಕ ಹಾಗೂ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು. ಕೃಷಿಯೊಂದಿಗೆ ಉಪ ಕಸುಬನ್ನು ಅಳವಡಿಸಿಕೊಳ್ಳಬೇಕು. ತೋಟಗಾರಿಕೆ ಬೆಳೆಗಳೊಂದಿಗೆ ಮಿಶ್ರ ಬೇಸಾಯಕ್ಕೆ ಒತ್ತು ನೀಡಬೇಕು. ಈ ನಿಟ್ಟಿನಲ್ಲಿ ರೈತರಿಗೂ ಅನೂಕೂಲವಾಗುವ ನಿಟ್ಟಿನಲ್ಲಿ ಇಂದು ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಖರೀದಿದಾರ ಹಾಗೂ ಮಾರಾಟಗಾರರ ಸಮಾವೇಶವನ್ನು ಏರ್ಪಡಿಸಲಾಗಿದೆ. ಇದರಲ್ಲಿ ಇದರ ಸದುಪಯೋಗ ಪಡೆದುಕೊಳ್ಳಬೇಕು. ಪ್ರತಿ ಮೂರು ತಿಂಗಳಿಗೊಮ್ಮೆ ಕೃಷಿಗೆ ಸಂಬಂಧಿಸಿದ ಇಂತಹ ಕಾರ್ಯಕ್ರಮವನ್ನು ಏರ್ಪಡಿಸಲಾಗುವುದು ಮಹಿಳಾ ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಸುಮಾರು 35 ರೈತ ಸಂಪನ್ಮೂಲ ಸಂಸ್ಥೆಗಳು ಈ ಸಮಾವೇಶದಲ್ಲಿ ಪಾಲ್ಗೊಂಡಿವೆ ಎಂದು ಹೇಳಿದರು.

ಈ ಸಮಾವೇಶದಲ್ಲಿ ನುರಿತ ಕೃಷಿ ತಜ್ಞರ ಸಲಹೆಗಳನ್ನು ಪಡೆದುಕೊಂಡು ಕೃಷಿಯಲ್ಲಿ ಹೆಚ್ಚುವರಿ ಇಳುವರಿ ಪಡೆಯುವ ಕ್ರಮಗಳನ್ನು ಅನುಸರಿಸಬೇಕು. ಬರಗಾಲ ಪರಿಹಾರ ಪಡೆದುಕೊಳ್ಳಲು ರೈತರು ಫ್ರೂಟ್ಸ ತಂತ್ರಾಂಶದಲ್ಲಿ ವಿವರ ನೋಂದಾಯಿಸಿಕೊಳ್ಳಬೇಕು.

ಇದೇ ಸಂದರ್ಭದಲ್ಲಿ ಮಹಾತೇಂಶ ಬಿರಾದಾರ, ಕೃಷಿ ಕಲ್ಪ ಫೌಂಡೇಶನ್ ಸಿ.ಇ.ಓ ಸಿ.ಎಂ ಪಾಟೀಲ್ ಹಾಗೂ ಜಿಲ್ಲಾ ಕೃಷಿಕ ಸಮಾಜ ಅಧ್ಯಕ್ಷರಾದ ದಾನಮ್ಮ ಪಾಟೀಲ ಅವರು ಮಾತನಾಡಿದರು.

ಪ್ರದರ್ಶನ ಹಾಗೂ ಮಾರಾಟ ಮಳಿಗೆಗಳು: ಮುತ್ತಗಿ, ಪಲಂಧು ರೈತ ಉತ್ಪಾದಕ ಸಂಸ್ಥೆಯಿಂದ ಲಿಂಬೆ ಮತ್ತು ಈರುಳ್ಳಿ ಸಂಸ್ಕರಣೆ ಪದಾರ್ಥಗಳು, ಗೋಳಸಂಗಿ ಗ್ರಾಮದ ಗೋಪಾಲ ರೈತನಿಂದ ಕಡಲೆ ಬೆಳೆ ಮತ್ತು ತೊಗರಿ ಬೆಳೆ, ಕೃಷಿ ತಂತ್ರ ಸಂಸ್ಥೆಯಿಂದ ಮಣ್ಣು ಪರೀಕ್ಷೆ ಯಂತ್ರ, ಸೆಲ್ಕೋ ಸೋಲಾರ್ ಕಂಪನಿಯಿಂದ ಆಹಾರ ಧಾನ್ಯ ಸಂಸ್ಕರಣಾ ಯಂತ್ರಗಳು, ಪರಂಪರಾಗತ ರೈತ ಸಂಸ್ಥೆಯಿಂದ ಶೇಂಗಾ, ಕುಸುಬೆ, ಕೊಬ್ಬರಿ, ಎಣ್ಣೆ, ಸಿದ್ದೇಶ್ವರ ಸಂಸ್ಥೆಯಿಂದ ಗೋ ಆಧಾರಿತ ಉತ್ಪನ್ನಗಳು, ಅಮೃತ ಆರ್ಗ್ಯಾನಿಕ್ಸಿಂದ ಸಾವಯುವ ಗೊಬ್ಬರ, ಸಫಲ್ ಸಂಸ್ಥೆಯಿಂದ ಬೆಳೆಗೆ ನೀರು ಮಾಪನ ಯಂತ್ರಗಳ ಕುರಿತು ಪ್ರದರ್ಶನ ಹಾಗೂ ಮಾರಾಟ ಮಳಿಗೆಗಳು ಗಮನ ಸೆಳೆದವು.

ಕಾರ್ಯಕ್ರಮದಲ್ಲಿ ಜಂಟಿ ಕೃಷಿ ನಿರ್ದೇಶಕ ಡಾ. ವಿಲಿಯಂಸ್ ರಾಜಶೇಖರ, ತೋಟಗಾರಿಕೆ ಉಪ ನಿರ್ದೇಶಕ ಭಾವಿದೊಡ್ಡಿ ರಾಹುಲ್ ಕುಮಾರ, ಕೃಷಿ ಸಹಾಯಕ ನಿರ್ದೇಶಕ ರಾಘವೇಂದ್ರ ಬಗಲಿ, ಬಿಎಲ್ ಡಿಇ ಸಂಸ್ಥೆಯ ಕುಲಕರ್ಣಿ, ವ್ಹಿಜನ್ ಗ್ರೂಪ್ ಸ್ಟಾರ್ಟಅಪ್ ಚೇರಮನ್ ಪ್ರಶಾಂತ ಪ್ರಕಾಶ, ವೇಗ್ರೋ ಸಂಸ್ಥೆ ಸಂಗ್ರಹಣಾ ಮುಖ್ಯಸ್ಥ ಸಾಗರ, ಕ್ಲೋವರ್ ವೆಂಚರ್ ಸಂಸ್ಥೆ ಸಂಗ್ರಹಣಾ ಮುಖ್ಯಸ್ಥ ರಘುನಾಥ, ಫಸಲ್ ಸಂಸ್ಥೆ ಮಾರಾಟ ಮತ್ತು ಮಾರ್ಕೆಟಿಂಗ್ ಮುಖ್ಯಸ್ಥ ಜಿತೇಂದ್ರ ಸಿಂಘಾಲ್, ಹುನಗುಂದ ಎಫ್.ಪಿ.ಓ. ನಿರ್ದೇಶಕ ರವಿ ಸಜ್ಜನರ, ಜಿಜ್ಞೇಶ್ ಜೋಶಿ, ಪ್ರಶಾಂತ ಹೆಗಡೆ ಸೇರಿದಂತೆ ವಿವಿಧ ಕೃಷಿ ಸಂಸ್ಥೆಗಳ ಮುಖ್ಯಸ್ಥರು, ಜಿಲ್ಲಾ ಮಟ್ಟದ ಕೃಷಿ ಅಧಿಕಾರಿಗಳು, ರೈತರು ಉಪಸ್ಥಿತರಿದ್ದರು.